# 2003ರ ಕರ್ನಾಟಕ ಅಧಿನಿಯಮ ಸಂಖ್ಯೆ: 37

# ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2002

## ಪ್ರಕರಣಗಳ ಪಟ್ಟಿ

ಪ್ರಕರಣಗಳು


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. 2ನೇ ಪ್ರಕರಣದ ತಿದ್ದುಪಡಿ
3. ವಾರ್ಡ್ ಸಭೆ
4. 13ನೇ ಪ್ರಕರಣದ ತಿದ್ದುಪಡಿ
5. 52ನೇ ಪ್ರಕರಣದ ತಿದ್ದುಪಡಿ
6. 53ನೇ ಪ್ರಕರಣದ ತಿದ್ದುಪಡಿ
7. 55ನೇ ಪ್ರಕರಣದ ತಿದ್ದುಪಡಿ
8. 58ನೇ ಪ್ರಕರಣದ ತಿದ್ದುಪಡಿ
9. 61ಬಿ ಪ್ರಕರಣವನ್ನು ಬಿಟ್ಟುಬಿಡುವುದು
10. 62ನೇ ಪ್ರಕರಣದ ತಿದ್ದುಪಡಿ
11. 63ನೇ ಪ್ರಕರಣದ ತಿದ್ದುಪಡಿ
12. 79ನೇ ಪ್ರಕರಣದ ಪ್ರತಿಯೋಜನೆ
13. 111ನೇ ಪ್ರಕರಣದ ಪ್ರತಿಯೋಜನೆ
14. 113ನೇ ಪ್ರಕರಣದ ತಿದ್ದುಪಡಿ
15. 113ಎ ಹೊಸ ಪ್ರಕರಣದ ಸೇರ್ಪಡೆ
16. 121ನೇ ಪ್ರಕರಣದ ತಿದ್ದುಪಡಿ
17. 122ನೇ ಪ್ರಕರಣದ ತಿದ್ದುಪಡಿ
18. 123ನೇ ಪ್ರಕರಣದ ತಿದ್ದುಪಡಿ
19. 124ನೇ ಪ್ರಕರಣದ ತಿದ್ದುಪಡಿ
20. 128ನೇ ಪ್ರಕರಣದ ತಿದ್ದುಪಡಿ

21. 129ನೇ ಪ್ರಕರಣದ ತಿದ್ದುಪಡಿ
22. 136ಎ ಹೊಸ ಪ್ರಕರಣದ ಸೇರ್ಪಡೆ
23. 140ನೇ ಪ್ರಕರಣದ ತಿದ್ದುಪಡಿ
24. 141ನೇ ಪ್ರಕರಣದ ತಿದ್ದುಪಡಿ
25. 152ನೇ ಪ್ರಕರಣದ ತಿದ್ದುಪಡಿ
26. 156ನೇ ಪ್ರಕರಣದ ತಿದ್ದುಪಡಿ
27. 161ನೇ ಪ್ರಕರಣದ ತಿದ್ದುಪಡಿ
28. 162ನೇ ಪ್ರಕರಣದ ತಿದ್ದುಪಡಿ
29. 163ನೇ ಪ್ರಕರಣದ ತಿದ್ದುಪಡಿ
30. 167ನೇ ಪ್ರಕರಣದ ತಿದ್ದುಪಡಿ
31. 168ನೇ ಪ್ರಕರಣದ ತಿದ್ದುಪಡಿ
32. 175ಎ ಹೊಸ ಪ್ರಕರಣದ ಸೇರ್ಪಡೆ
33. 179ನೇ ಪ್ರಕರಣದ ತಿದ್ದುಪಡಿ
34. 180ನೇ ಪ್ರಕರಣದ ತಿದ್ದುಪಡಿ
35. 193ನೇ ಪ್ರಕರಣದ ತಿದ್ದುಪಡಿ
36. 197ನೇ ಪ್ರಕರಣದ ತಿದ್ದುಪಡಿ
37. 202ನೇ ಪ್ರಕರಣದ ತಿದ್ದುಪಡಿ
38. 206ನೇ ಪ್ರಕರಣದ ತಿದ್ದುಪಡಿ
39. 209ನೇ ಪ್ರಕರಣದ ತಿದ್ದುಪಡಿ
40. 215ನೇ ಪ್ರಕರಣದ ತಿದ್ದುಪಡಿ
41. 222ನೇ ಪ್ರಕರಣದ ತಿದ್ದುಪಡಿ
42. 308ಎ ಯಿಂದ 308ಡಿ ಹೊಸ ಪ್ರಕರಣಗಳ ಸೇರ್ಪಡೆ
43. 310ಎ ಪ್ರಕರಣದ ತಿದ್ದುಪಡಿ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ ಉಪಬಂಧಕಲ್ಪಿಸುವುದಕ್ಕಾಗಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ, ಎಂದರೆ:-

(i) ಪ್ರತಿಯೊಂದು ಗ್ರಾಮ ಪಂಚಾಯತ್ ಚುನಾವಣಾ ಕ್ಷೇತ್ರದ ಸಂಬಂಧದಲ್ಲಿ ಒಂದು ವಾರ್ಡ್ ಸಭೆಯನ್ನು ಮತ್ತು ಸಂಪೂರ್ಣ ಪಂಚಾಯತ್ ಪ್ರದೇಶಕ್ಕಾಗಿ ಒಂದು ಗ್ರಾಮ ಸಭೆಯನ್ನು ವ್ಯವಸ್ಥೆಗೊಳಿಸುವುದು ಮತ್ತು ಗ್ರಾಮ ಮಟ್ಟದಲ್ಲಿ ಜನರ ಪಾಲುಗೊಳ್ಳುವಿಕೆಯು ಹೆಚ್ಚು ಅರ್ಥಪೂರ್ಣ ಮತ್ತು ಗಾಢವಾಗಿರುವಂತೆ ನೋಡಿಕೊಳ್ಳಲು ಅವರಿಗೆ ಇನ್ನೂ ಹೆಚ್ಚು ಜವಾಬ್ದಾರಿಗಳನ್ನು ವಹಿಸುವುದು;

(ii) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತ್‌ಗಳ ಸದಸ್ಯರುಗಳು ಚುನಾವಣಾ ವೆಚ್ಚಗಳ ಲೆಕ್ಕಗಳನ್ನು ಸಲ್ಲಿಸಲು ವಿಫಲರಾದಲ್ಲಿ ಅವರನ್ನು ಮೂರು ವರ್ಷಗಳ ಅವಧಿಗಾಗಿ ಅನರ್ಹಗೊಳಿಸುವುದು;

(iii) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಸಭೆಗೆ ಹಾಜರಾಗುವ ಸದಸ್ಯರುಗಳ ಪೈಕಿ ಸಾಧ್ಯವಾದಷ್ಟು ಮಟ್ಟಿಗೆ ಮೂರನೇ ಒಂದರಷ್ಟು ಸದಸ್ಯರು ಮಹಿಳಾ ಸದಸ್ಯರಾಗಿರುವುದನ್ನು ಖಚಿತಪಡಿಸಿಕೊಳ್ಳುವುದು;

(iv) ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಯ ಸಭೆಯಲ್ಲಿ ಪರಿಗಣನೆಗಾಗಿ ಬರುವ ಯಾವುದೇ ವಿಷಯದಲ್ಲಿ ತಾನು ಹಣಕಾಸಿನ ರೂಪದ ಯಾವುದೇ ಹಿತಾಸಕ್ತಿಯನ್ನು ಹೊಂದಿದ್ದಾನೆಯೇ ಎಂಬುವದನ್ನು ತಿಳಿಸುವಂತೆ ಅಗತ್ಯಪಡಿಸುವುದು;

(v) ಗ್ರಾಮ ಪಂಚಾಯತಿಯ ಅಧ್ಯಕ್ಷನನ್ನು ಕಾರ್ಯನಿರ್ವಾಹಕ ಮುಖ್ಯಸ್ಥನನ್ನಾಗಿ ಮಾಡುವುದು;

(vi) ಗ್ರಾಮ ಪಂಚಾಯತಿಯ ಕಾರ್ಯದರ್ಶಿಯ ಅಧಿಕಾರಗಳು ಮತ್ತು ಕರ್ತವ್ಯಗಳನ್ನು ಪುನಃ ಪರಿಭಾಷಿಸುವುದು;

(vii) ರಾಜ್ಯ ಸಿವಿಲ್ ಸೇವೆಗಳ ಅಧಿಕಾರಿಗಳು ಮತ್ತು ನೌಕರರ ಸೇವೆಯನ್ನು ಪಡೆದುಕೊಂಡು ಅವರನ್ನು ಗ್ರಾಮ ಪಂಚಾಯತಿಗಳಿಗೆ ನಿಯೋಜಿಸುವುದು ಮತ್ತು ರಾಜ್ಯ ಸಿವಿಲ್ ಸೇವೆಗಳಿಗೆ ಸೇರಿರದ ತಾಂತ್ರಿಕ ಸಿಬ್ಬಂದಿಯ ಸೇವೆಯನ್ನು ನಿರ್ದಿಷ್ಟ ಕಾಮಗಾರಿಗಾಗಿ ಬಳಸಿಕೊಳ್ಳಲು ಗ್ರಾಮ ಪಂಚಾಯತಿಗೆ ಅಧಿಕಾರ ನೀಡುವುದು;

(viii) ತಾಲ್ಲೂಕು ಪಂಚಾಯತಿಯ ಮತ್ತು ಜಿಲ್ಲಾ ಪಂಚಾಯತಿಗಳ ಚುನಾಯಿತ ಸದಸ್ಯರ ಸ್ಥಾನಗಳ ಮೀಸಲಾತಿ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯ ಮಾಡುವುದಕ್ಕೆ ಸಂಬಂಧಪಟ್ಟ ವಿಷಯಗಳನ್ನು ನಿರ್ಧರಿಸುವ ರಾಜ್ಯ ಸರ್ಕಾರದ ಅಧಿಕಾರಗಳನ್ನು ರಾಜ್ಯ ಚುನಾವಣಾ ಆಯೋಗಕ್ಕೆ ವಹಿಸಿಕೊಡುವುದು;

(ix) ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿಯ ಸದಸ್ಯರು ತಮ್ಮ ಆಸ್ತಿಗಳನ್ನು ಘೋಷಿಸುವಂತೆ ಅಗತ್ಯಪಡಿಸುವ ಬಗ್ಗೆ ಮತ್ತು ನಿಜವಲ್ಲದ ಅಥವಾ ಸರಿಯಾದುದಲ್ಲದ ಘೋಷಣೆಯನ್ನು ಸಲ್ಲಿಸಿದ್ದಕ್ಕಾಗಿ ಸದಸ್ಯತ್ವ ನಿಂತುಹೋಗುವ ಬಗ್ಗೆ ಉಪಬಂಧಕಲ್ಪಿಸುವುದು;

(x) ತಾಲ್ಲೂಕು ಪಂಚಾಯತಿಯ ಅಥವಾ ಜಿಲ್ಲಾ ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇಬ್ಬರ ಪದಗಳು ಖಾಲಿ ಇದ್ದಲ್ಲಿ ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನಿರ್ವಹಿಸಲು ಸಾಮಾಜಿಕ ನ್ಯಾಯದ ಸ್ಥಾಯಿ ಸಮಿತಿಯ ಅಧ್ಯಕ್ಷನನ್ನು ನೇಮಿಸಲು ಉಪಬಂಧ ಕಲ್ಪಿಸುವುದು;

(xi) ಚುನಾವಣಾ ವೆಚ್ಚಗಳ ಲೆಕ್ಕ ಪತ್ರಗಳನ್ನು ನಿರ್ವಹಿಸುವುದು ಮತ್ತು ಅದನ್ನು ಸಲ್ಲಿಸುವುದು ಮುಂತಾದುವುಗಳಿಗೆ ಉಪಬಂಧ ಕಲ್ಪಿಸುವುದು.

ಈ ವಿಧೇಯಕದಲ್ಲಿ ಇತರ ಕೆಲವು ಪ್ರಾಸಂಗಿಕ ಮತ್ತು ಆನುಷಂಗಿಕವಾದ ವಿಷಯಗಳ ಬಗ್ಗೆ ಸಹ ಉಪಬಂಧಗಳನ್ನು ಕಲ್ಪಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2002ರ ವಿಧಾನಸಭೆಯ ವಿಧೇಯಕ ಸಂಖ್ಯೆ 27]

[Entry 5 of List-II of Seventh Schedule to the Constitution of India]

## 2003ರ ಕರ್ನಾಟಕ ಅಧಿನಿಯಮ ಸಂಖ್ಯೆ: 37

*(2003ರ ಸೆಪ್ಟೆಂಬರ್ 3ನೇ ದಿನಾಂಕದಂದು ಕರ್ನಾಟಕ ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)*

## ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2002

*(2003ರ ಸೆಪ್ಟೆಂಬರ್ 2ನೇ ದಿನಾಂಕದಂದು ಕರ್ನಾಟಕ ರಾಜ್ಯ ಪಾಲರ ಅನುಮತಿಯನ್ನು ಪಡೆಯಲಾಗಿದೆ)*

ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ಅಧಿನಿಯಮ.

ಇದರಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ನ್ನು (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಅಧಿನಿಯಮ, 2002 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂತೆ ಅಂತಹ [1][ದಿನಾಂಕದಿಂದ] ಜಾರಿಗೆ ಬರತಕ್ಕದ್ದು ಮತ್ತು ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

**2. 2ನೇ ಪ್ರಕರಣದ ತಿದ್ದುಪಡಿ.-** ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) (ಇದರಲ್ಲಿ ಇನ್ನು ಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(1) (16)ನೇ ಖಂಡದಲ್ಲಿ, "ಗ್ರಾಮ ಪಂಚಾಯತಿಯ ಪ್ರದೇಶದೊಳಗೆ ಸೇರಿರುವ ಗ್ರಾಮಕ್ಕೆ ಸಂಬಂಧಿಸಿದ ಮತದಾರರ ಪಟ್ಟಿಯಲ್ಲಿ" ಎಂಬ ಪದಗಳಿಗೆ, "ಗ್ರಾಮ ಪಂಚಾಯತಿಯ ಮತದಾರರ ಪಟ್ಟಿಯಲ್ಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(2) (42)ನೇ ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

---

ಕರ್ನಾಟಕ ರಾಜ್ಯ ಪತ್ರದ ಭಾಗ IVಎ ವಿಶೇಷ ಪತ್ರಿಕೆ ಸಂಖ್ಯೆ: 1045 ದಿನಾಂಕ: 3.9.2003 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 33 ಶಾಸನ 2002

1. ಅಧಿನಿಯಮದ ಎಲ್ಲಾ ಉಪಬಂಧಗಳು ದಿನಾಂಕ: 1.10.2003 ರಿಂದ ಜಾರಿಗೆ ಬಂದಿವೆ. ಅಧಿಸೂಚನೆ ಸಂಖ್ಯೆ ಗ್ರಾಅಪ 204 ಜಿಪಸ 2003 ದಿನಾಂಕ: 1.10.2003 (ಕರ್ನಾಟಕ ರಾಜ್ಯಪತ್ರ ಭಾಗ 4ಎ, ವಿಶೇಷ ಪತ್ರಿಕೆ 1151 ದಿನಾಂಕ: 1.10.2003)

"(42ಎ) 'ವಾರ್ಡ್ ಸಭೆ' ಎಂದರೆ, ಪ್ರತಿಯೊಂದು ಗ್ರಾಮ ಪಂಚಾಯಿತಿಯ ಚುನಾವಣಾ ಕ್ಷೇತ್ರದ ಮತದಾರರ ಪಟ್ಟಿಯಲ್ಲಿ ನೋಂದಾಯಿತರಾದ ವ್ಯಕ್ತಿಗಳಿಂದ ಕೂಡಿದ ಒಂದು ನಿಕಾಯ."

**3. ಅಧ್ಯಾಯ-II ಮತ್ತು 3ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ ಅಧ್ಯಾಯ-IIಕ್ಕೆ ಮತ್ತು 3ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

## "ಅಧ್ಯಾಯ-II

## ವಾರ್ಡ್ ಸಭೆ ಮತ್ತು ಗ್ರಾಮಸಭೆ

**3. ವಾರ್ಡ್ ಸಭೆ.-** (1) ಸರ್ಕಾರದ ಸಾಮಾನ್ಯ ಆದೇಶಗಳಿಗೊಳಪಟ್ಟು, ವಾರ್ಡ್ ಸಭೆಯು ಕೊನೇಪಕ್ಷ ಆರು ತಿಂಗಳುಗಳಿಗೆ ಒಂದು ಸಲ ಸಭೆ ಸೇರತಕ್ಕದ್ದು.

(2) ವಾರ್ಡ್ ಸಭೆಯು ಸಭೆ ಸೇರುವಾಗ, ವಾರ್ಡ್ ಸಭೆಯ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೆಯ ಒಂದರಷ್ಟು ಅಥವಾ ಇಪ್ಪತ್ತು ಸದಸ್ಯರು, ಇವುಗಳಲ್ಲಿ ಯಾವುದು ಕಡಿಮೆಯೋ, ಅದು ಸಭೆಯ ಕೋರಂ ಆಗಿರತಕ್ಕದ್ದು. ಸಾಧ್ಯವಾದಷ್ಟು ಮಟ್ಟಿಗೆ, ವಾರ್ಡ್ ಸಭೆಗೆ ಹಾಜರಾಗುವ ಮತದಾರರಲ್ಲಿ ಶೇಕಡಾ ಮೂವತ್ತಕ್ಕೆ ಕಡಿಮೆಯಲ್ಲದಷ್ಟು ಸಂಖ್ಯೆಯಲ್ಲಿ ಮಹಿಳೆಯರಿರತಕ್ಕದ್ದು. ಸಾಧ್ಯವಾದಷ್ಟು ಮಟ್ಟಿಗೆ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು, ವಾರ್ಡ್ ಸಭೆಯಲ್ಲಿನ ಅವರ ಜನಸಂಖ್ಯೆಯ ಅನುಪಾತಕ್ಕನುಸಾರವಾಗಿ ಪ್ರತಿನಿಧಿಸತಕ್ಕದ್ದು.

(3) ನಿಯಮಿಸಬಹುದಾದಂತೆ ಅಂತಹ ನಿಯಮಗಳಿಗೊಳಪಟ್ಟು, ವಾರ್ಡ್ ಸಭೆಯು ಈ ಮುಂದಿನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(ಎ) ವಾರ್ಡ್ ಸಭೆಯ ಪ್ರದೇಶದೊಳಗೆ ಅನುಷ್ಠಾನಗೊಳಿಸಬೇಕಾದ ಯೋಜನೆಗಳ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಸ್ತಾವಗಳನ್ನು ಮಾಡುವುದು ಮತ್ತು ಅವುಗಳ ಆದ್ಯತೆಯನ್ನು ನಿರ್ಧರಿಸುವುದು ಮತ್ತು ಗ್ರಾಮಪಂಚಾಯಿತಿಯ ಅಭಿವೃದ್ಧಿ ಯೋಜನೆಯಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಅದನ್ನು ಗ್ರಾಮಸಭೆಯ ಮುಂದಿಡಲು ಕಳುಹಿಸಿಕೊಡುವುದು;

(ಬಿ) ನಿಗದಿಪಡಿಸಿದ ಮಾನದಂಡಗಳ ಆಧಾರದ ಮೇಲೆ ಫಲಾನುಭವಿ ಆಧಾರಿತ ಯೋಜನೆಗಳಿಗಾಗಿ, ವಾರ್ಡ್ ಸಭೆಯ ಪ್ರದೇಶದಿಂದ ಅತ್ಯಂತ

ಅರ್ಹ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ಆದ್ಯತೆಯ ಕ್ರಮಕ್ಕನುಸಾರ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವುದು ಮತ್ತು ಗ್ರಾಮ ಪಂಚಾಯಿತಿಯ ಅಭಿವೃದ್ಧಿಯೋಜನೆಯಲ್ಲಿ ಸೇರಿಸಿಕೊಳ್ಳುವುದಕ್ಕಾಗಿ ಅದನ್ನು ಗ್ರಾಮಸಭೆಯ ಮುಂದಿಡಲು ಕಳುಹಿಸಿಕೊಡುವುದು;

(ಸಿ) ಸರ್ಕಾರದಿಂದ ನಿವೃತ್ತಿ ವೇತನಗಳು ಮತ್ತು ಸಬ್ಸಿಡಿಗಳಂಥ ವಿವಿಧ ಬಗೆಯ ಕಲ್ಯಾಣ ನೆರವನ್ನು ಪಡೆದುಕೊಳ್ಳುತ್ತಿರುವ ವ್ಯಕ್ತಿಗಳ ಅರ್ಹತೆಯ ಬಗ್ಗೆ ಸತ್ಯಾಪನೆ ಮಾಡುವುದು;

(ಡಿ) ಗ್ರಾಮ ಪಂಚಾಯತಿಯ ಅಧಿಕಾರಿಗಳು ಸಲ್ಲಿಸಬೇಕಾದ ಸೇವೆಗೆ ಮತ್ತು ವಾರ್ಡ್ ಸಭೆಯ ತರುವಾಯದ ಮುಂದಿನ ಆರು ತಿಂಗಳ ಅವಧಿಯಲ್ಲಿ ಅವರು ಮಾಡಲು ಉದ್ದೇಶಿಸಲಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅವರಿಂದ ಮಾಹಿತಿ ಪಡೆಯುವುದು;

(ಇ) ವಾರ್ಡ್ ಸಭೆಯ ಪ್ರದೇಶದ ಸಂಬಂಧದಲ್ಲಿ ಗ್ರಾಮ ಪಂಚಾಯಿತಿಯ ಪ್ರತಿಯೊಂದು ತೀರ್ಮಾನವು ಎಷ್ಟು ವಿವೇಚನಾಯುತವಾಗಿದೆಯೆಂಬ ಬಗ್ಗೆ ಗ್ರಾಮ ಪಂಚಾಯಿತಿಯಿಂದ ಮಾಹಿತಿ ಪಡೆಯುವುದು;

(ಎಫ್) ವಾರ್ಡ್ ಸಭೆಯ ತೀರ್ಮಾನದ ಮೇಲೆ ಕೈಕೊಂಡ ಅನುಸರಣಾ ಕ್ರಮದ ಮೇಲೆ ಗ್ರಾಮ ಪಂಚಾಯಿತಿಯಿಂದ ಮಾಹಿತಿಪಡೆಯುವುದು;

(ಜಿ) ಅಭಿವೃದ್ಧಿ ಕಾಮಗಾರಿಗಾಗಿ ಸ್ವಯಂ ಸೇವಾ ಕಾರ್ಮಿಕರನ್ನು ಹಾಗೂ ಹಣದ ರೂಪದಲ್ಲಿ ಮತ್ತು ವಸ್ತು ರೂಪದಲ್ಲಿ ವಂತಿಗೆಗಳನ್ನು ಒದಗಿಸುವುದು ಮತ್ತು ಸಂಗ್ರಹಿಸುವುದು ಮತ್ತು ಸ್ವಯಂ ಸೇವಾ ತಂಡಗಳ ಮೂಲಕ ಅಂಥ ಕಾಮಗಾರಿಗಳ ಮೇಲ್ವಿಚಾರಣೆ ನಡೆಸುವುದು;

(ಹೆಚ್) ವಾರ್ಡ್ ಸಭೆಯ ಸದಸ್ಯರು, ಗ್ರಾಮ ಪಂಚಾಯಿತಿಗೆ ತೆರಿಗೆಗಳನ್ನು ಸಂದಾಯ ಮಾಡುವಂತೆ ಮತ್ತು ಸಾಲಗಳನ್ನು ಮರು ಸಂದಾಯ ಮಾಡುವಂತೆ ಪ್ರಯತ್ನಿಸುವುದು.

(ಐ) ವಾರ್ಡ್ ಸಭೆಯ ಪ್ರದೇಶದೊಳಗೆ ಬೀದಿ ದೀಪಗಳು, ಬೀದಿ ಅಥವಾ ಸಮುದಾಯ ನಲ್ಲಿಗಳು, ಸಾರ್ವಜನಿಕ ಬಾವಿಗಳು, ಸಾರ್ವಜನಿಕ ನಿರ್ಮಲೀಕರಣ ಘಟಕಗಳು, ನೀರಾವರಿ ಸೌಲಭ್ಯಗಳು ಮತ್ತು ಅಂತಹ ಇತರ ಸಾರ್ವಜನಿಕ ಸೌಲಭ್ಯ ಯೋಜನೆಗಳಿಗಾಗಿ ಸ್ಥಳಗಳನ್ನು ಸಲಹೆ ಮಾಡುವುದು;

(ಜೆ) ವಾರ್ಡ್ ಸಭೆಯ ಪ್ರದೇಶದಲ್ಲಿ ನೀರು ಸರಬರಾಜು ಮತ್ತು ಬೀದಿ ದೀಪ ವ್ಯವಸ್ಥೆಗಳಲ್ಲಿ ಕೊರತೆಗಳನ್ನು ಗುರುತಿಸುವುದು ಮತ್ತು ಪರಿಹಾರ ಕ್ರಮಗಳನ್ನು ಸಲಹೆ ಮಾಡುವುದು;

(ಕೆ) ಸ್ವಚ್ಛತೆ, ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿವಾರಣೆಯಂಥ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳ ಬಗ್ಗೆ ಅರಿವು ಮೂಡಿಸುವುದು;

(ಎಲ್) ವಾರ್ಡ್ ಸಭೆಯ ಪ್ರದೇಶದಲ್ಲಿ ನೈರ್ಮಲ್ಯ ವ್ಯವಸ್ಥೆಗಳ ಸಂಬಂಧದಲ್ಲಿ ಗ್ರಾಮ ಪಂಚಾಯಿತಿಯ ನೌಕರರಿಗೆ ನೆರವು ನೀಡುವುದು ಮತ್ತು ಕಸವನ್ನು ತೆಗೆದು ಹಾಕುವಲ್ಲಿ ಸ್ವಯಂ ಸೇವೆ ಸಲ್ಲಿಸುವುದು;

(ಎಮ್) ವಾರ್ಡ್ ಸಭೆಯ ಪ್ರದೇಶದೊಳಗೆ ವಯಸ್ಕರ ಶಿಕ್ಷಣ ಕಾರ್ಯಕ್ರಮಕ್ಕೆ ಉತ್ತೇಜನ ನೀಡುವುದು;

(ಎನ್) ವಿಶೇಷವಾಗಿ, ರೋಗ ಪ್ರತಿಬಂಧ ಮತ್ತು ಕುಟುಂಬ ಕಲ್ಯಾಣದ ವಿಷಯದಲ್ಲಿ ವಾರ್ಡ್ ಸಭೆಯ ಪ್ರದೇಶದಲ್ಲಿಯ ಸಾರ್ವಜನಿಕ ಆರೋಗ್ಯ ಕೇಂದ್ರಗಳ ಚಟುವಟಿಕೆಗಳಿಗೆ ನೆರವು ನೀಡುವುದು ಮತ್ತು ಸಾಂಕ್ರಾಮಿಕ ರೋಗಗಳು ಮತ್ತು ನೈಸರ್ಗಿಕ ವಿಕೋಪಗಳು ಸಂಭವಿಸಿದ ಬಗ್ಗೆ ಕೂಡಲೇ ವರದಿ ಮಾಡುವ ವ್ಯವಸ್ಥೆ ಮಾಡುವುದು;

(ಓ) ವಾರ್ಡ್ ಸಭೆಯ ಪ್ರದೇಶದಲ್ಲಿ ಜನರ ವಿವಿಧ ಸಮೂಹಗಳ ನಡುವೆ ಸಾಮರಸ್ಯ ಮತ್ತು ಐಕ್ಯತೆಯನ್ನು ಬೆಳೆಸುವುದು ಮತ್ತು ಆ ಸ್ಥಳದ ಜನರ ಪ್ರತಿಭೆಯನ್ನು ಅಭಿವ್ಯಕ್ತ ಗೊಳಿಸುವುದಕ್ಕಾಗಿ ಸಾಂಸ್ಕೃತಿಕ ಉತ್ಸವಗಳು ಮತ್ತು ಕ್ರೀಡಾಕೂಟಗಳನ್ನು ವ್ಯವಸ್ಥೆ ಮಾಡುವುದು; ಮತ್ತು

(ಪಿ) ನಿಯಮಿಸಬಹುದಾದಂತೆ ಅಂತಹ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

(4) ವಾರ್ಡ್ ಸಭೆಯ ಸಭೆಗಳನ್ನು ಕರೆಯುವುದಕ್ಕಾಗಿ ಮತ್ತು ನಡೆಸುವುದಕ್ಕಾಗಿ ಕಾರ್ಯವಿಧಾನವು, ನಿಯಮಿಸಬಹುದಾಂಥದ್ದಾಗಿರತಕ್ಕದ್ದು.

(5) ವಾರ್ಡ್ ಸಭೆಯ ಪ್ರತಿಯೊಂದು ಸಭೆಗೆ ಸಂಬಂಧಪಟ್ಟ ವಾರ್ಡ್ ಸಭೆಯ ಪ್ರದೇಶದಿಂದ ಚುನಾಯಿತನಾದ ಗ್ರಾಮ ಪಂಚಾಯಿತಿಯ ಸದಸ್ಯನು ಮತ್ತು ಅವನ ಗೈರು ಹಾಜರಿಯಲ್ಲಿ ಗ್ರಾಮ ಪಂಚಾಯಿತಿಯು ನಾಮನಿರ್ದೇಶನ ಮಾಡಿದ ಅದರ ಯಾವೊಬ್ಬ ಇತರ ಸದಸ್ಯನು ಅಧ್ಯಕ್ಷತೆ ವಹಿಸತಕ್ಕದ್ದು.

(6) ವಾರ್ಡ್ ಸಭೆಯ ಸಭೆಯಲ್ಲಿಯ ಯಾವುದೇ ವಿಷಯಕ್ಕೆ ಸಂಬಂಧಪಟ್ಟ ಎಲ್ಲ ನಿರ್ಣಯಗಳನ್ನು, ಹಾಜರಿರುವ ಮತ್ತು ಮತಚಲಾಯಿಸುವ ಸದಸ್ಯರ ಬಹುಮತದಿಂದ ಅಂಗೀಕರಿಸತಕ್ಕದ್ದು.

**3ಎ. ಗ್ರಾಮ ಸಭೆ.-** (1) ಗ್ರಾಮ ಸಭೆಯು ಕೊನೆಯಪಕ್ಷ ಆರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು:

ಪರಂತು, ಗ್ರಾಮ ಸಭೆಯ ವಿಶೇಷ ಸಭೆಗಾಗಿ ಗ್ರಾಮ ಸಭೆಯ ಸದಸ್ಯರ ಶೇಕಡಾ ಹತ್ತಕ್ಕಿಂತ ಕಡಿಮೆಯಲ್ಲದ ಸದಸ್ಯರು ಕೋರಿಕೆಯನ್ನು ಸಲ್ಲಿಸಿ, ಅಂತಹ ಕೋರಿಕೆಯಲ್ಲಿ ಕಲಾಪಗಳ ವಿಷಯಗಳನ್ನು ನಿರ್ದಿಷ್ಟಪಡಿಸಿದ್ದರೆ ವಿಶೇಷ ಸಭೆಯನ್ನು ಕರೆಯತಕ್ಕದ್ದು. ಹಾಗೂ ಒಂದು ವಿಶೇಷ ಸಭೆಗೂ ಮತ್ತೊಂದು ವಿಶೇಷ ಸಭೆಗೂ ಕನಿಷ್ಠ ಮೂರು ತಿಂಗಳ ಅಂತರ ಇರತಕ್ಕದ್ದು.

(2) ಗ್ರಾಮ ಸಭೆಯು ಸಭೆ ಸೇರುವಾಗ ಗ್ರಾಮ ಸಭೆಯ ಸದಸ್ಯರ ಒಟ್ಟು ಸಂಖ್ಯೆಯ ಹತ್ತನೇ ಒಂದಕ್ಕೆ ಕಡಿಮೆಯಲ್ಲದಷ್ಟು ಅಥವಾ ನೂರು ಸದಸ್ಯರು, ಇವುಗಳಲ್ಲಿ ಯಾವುದು ಕಡಿಮೆಯೋ ಅದು ಸಭೆಯ ಕೋರಂ ಆಗಿರತಕ್ಕದ್ದು. ಸಾಧ್ಯವಾದಷ್ಟುಮಟ್ಟಿಗೆ, ಪಂಚಾಯತ್ ಪ್ರದೇಶದಲ್ಲಿಯ ಪ್ರತಿಯೊಂದು ವಾರ್ಡ್ ಸಭೆಯಿಂದ ಕನಿಷ್ಠ ಹತ್ತು ಸದಸ್ಯರು ಸಭೆಗೆ ಹಾಜರಾಗತಕ್ಕದ್ದು ಮತ್ತು ಗ್ರಾಮ ಸಭೆಗೆ ಹಾಜರಾಗುವ ಸದಸ್ಯರಲ್ಲಿ ಶೇಕಡಾ ಮೂವತ್ತಕ್ಕೆ ಕಡಿಮೆಯಲ್ಲದಷ್ಟು ಮಹಿಳೆಯರಿರತಕ್ಕದ್ದು. ಸಾಧ್ಯವಾದಷ್ಟು ಮಟ್ಟಿಗೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳಿಗೆ ಸೇರಿದ ವ್ಯಕ್ತಿಗಳು, ಗ್ರಾಮ ಸಭೆಯಲ್ಲಿ ತಮ್ಮ ಜನ ಸಂಖ್ಯೆಯ ಅನುಪಾತಕ್ಕನುಸಾರವಾಗಿ ಪ್ರತಿನಿಧಿಸತಕ್ಕದ್ದು.

(3) ನಿಯಮಿಸಬಹುದಾದಂತೆ ಅಂತಹ ನಿಯಮಗಳಿಗೊಳಪಟ್ಟು, ಗ್ರಾಮಸಭೆಯು, ಇದರಲ್ಲಿ ಇನ್ನು ಮುಂದೆ ಉಪಬಂಧಿಸಲಾದಂತೆ ಅಂತಹ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(ಎ) ಗ್ರಾಮ ಪಂಚಾಯತಿಯು ತಯಾರಿಸಿದ ವಾರ್ಷಿಕ ಯೋಜನೆಯನ್ನು ಪರಿಗಣಿಸುವುದು ಮತ್ತು ಅನುಮೋದಿಸುವುದು;

(ಬಿ) ಗ್ರಾಮ ಪಂಚಾಯಿತಿಯ ಮೂಲಕ ವಾರ್ಡ್ ಸಭೆಗಳ ಶಿಫಾರಸುಗಳು ಮತ್ತು ಸಲಹೆಗಳನ್ನು ಪಡೆದುಕೊಂಡು ಮತ್ತು ಪರಿಗಣಿಸಿದ ತರುವಾಯ, ಜಿಲ್ಲಾ ಪಂಚಾಯತಿಯ ಅಥವಾ ತಾಲ್ಲೂಕು ಪಂಚಾಯತಿಯ ಮೂಲಕ ಪಂಚಾಯಿತಿ ಪ್ರದೇಶದಲ್ಲಿ ಅನುಷ್ಠಾನಗೊಳಿಸಬೇಕಾದ ಯೋಜನೆಗಳ ಮತ್ತು ಅಭಿವೃದ್ಧಿ ಕಾರ್ಯಕ್ರಮಗಳ ಪ್ರಸ್ತಾವಗಳನ್ನು ಸೃಜಿಸುವುದು ಮತ್ತು ಅವುಗಳ ಆದ್ಯತೆಯನ್ನು ನಿರ್ಧರಿಸುವುದು;

(ಸಿ) ಗ್ರಾಮ ಪಂಚಾಯಿತಿಯು ತಾಲ್ಲೂಕು ಪಂಚಾಯತಿಯು, ಜಿಲ್ಲಾ ಪಂಚಾಯತಿಯು ಅಥವಾ ಸರ್ಕಾರವು ನಿಗದಿಪಡಿಸಿದ ಮಾನದಂಡಗಳ ಆಧಾರದ ಮೇಲೆ ಫಲಾನುಭವಿ ಆಧಾರಿತ ಯೋಜನೆಗಳಿಗಾಗಿ ಪಂಚಾಯತಿ ಪ್ರದೇಶದಿಂದ ಅತ್ಯಂತ ಅರ್ಹ ವ್ಯಕ್ತಿಗಳನ್ನು ಗುರುತಿಸುವುದು ಮತ್ತು ವಾರ್ಡ್ ಸಭೆಗಳು ಕಳುಹಿಸಿದ ವೈಯಕ್ತಿಕ ಫಲಾನುಭವಿಗಳ ಆದ್ಯತಾ ಪಟ್ಟಿಯನ್ನು ಪರಿಗಣಿಸಿದ ತರುವಾಯ ಆದ್ಯತಾ ಕ್ರಮಕ್ಕನುಸಾರವಾಗಿ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಿದ್ಧಪಡಿಸುವುದು. ಸಂಬಂಧಪಟ್ಟ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಅಥವಾ ಸಂದರ್ಭಾನುಸಾರ ಸರ್ಕಾರವು ಅಂತಹ ಪಟ್ಟಿಗೆ ಬದ್ಧವಾಗಿರತಕ್ಕದ್ದು;

(ಡಿ) ಅಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಪ್ರಸಾರ ಮಾಡುವುದು ಮತ್ತು ಸ್ಥಳೀಯವಾಗಿ ಲಭ್ಯವಿರುವ ಸೌಲಭ್ಯಗಳನ್ನು ಒದಗಿಸುವ ಮೂಲಕ ಅಭಿವೃದ್ಧಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವಲ್ಲಿ ನೆರವು ನೀಡುವುದು. ಹಾಗೂ ಇವುಗಳ ನಿರ್ವಹಣೆಯ ಸಂಬಂಧದಲ್ಲಿ ಮಾಹಿತಿ ಒದಗಿಸುವುದು;

(ಇ) ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದಕ್ಕಾಗಿ ಅಗತ್ಯವಾದ ವಿವರಗಳನ್ನು ಸಂಗ್ರಹಿಸುವಲ್ಲಿ ಮತ್ತು ಕ್ರೋಢೀಕರಿಸುವಲ್ಲಿ ಸಾಮಾಜಿಕ, ಆರ್ಥಿಕ ಅಂಕಿ ಅಂಶಗಳನ್ನು ಸಂಗ್ರಹಿಸುವಲ್ಲಿ ಮತ್ತು ಆರೋಗ್ಯ, ಸಾಕ್ಷರತೆ ಮತ್ತು ಅದೇ ಬಗೆಯ ಅಭಿವೃದ್ಧಿ ಆಂದೋಲನಗಳಲ್ಲಿ ಭಾಗವಹಿಸುವಂತೆ ಪ್ರಚಾರ ಮಾಡುವಲ್ಲಿ ಗ್ರಾಮ ಪಂಚಾಯಿತಿಗೆ ನೆರವು ನೀಡುವುದು;

(ಎಫ್) ಗ್ರಾಮಸಭೆಯ ಸಭೆಯ ತರುವಾಯ ಮುಂದಿನ ಆರು ತಿಂಗಳುಗಳ ಅವಧಿಯಲ್ಲಿ, ಗ್ರಾಮ ಪಂಚಾಯತಿಯ ಅಧಿಕಾರಿಗಳು ಸಲ್ಲಿಸಬೇಕಾದ ಸೇವೆಗೆ ಮತ್ತು ಅವರು ಮಾಡಲು ಉದ್ದೇಶಿಸಿದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅವರಿಂದ ಮಾಹಿತಿಯನ್ನು ಪಡೆಯುವುದು;

(ಜಿ) ಪಂಚಾಯತಿ ಪ್ರದೇಶಕ್ಕೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಯ ಪ್ರತಿಯೊಂದು ತೀರ್ಮಾನವು ಎಷ್ಟು ವಿವೇಚನಾಯುತವಾಗಿದೆಯೆಂಬ ಬಗ್ಗೆ ಗ್ರಾಮ ಪಂಚಾಯತಿಯಿಂದ ಮಾಹಿತಿ ಪಡೆಯುವುದು;

(ಎಚ್) ಗ್ರಾಮ ಸಭೆಯ ತೀರ್ಮಾನದ ಮೇಲೆ ಕೈಕೊಂಡ ಅನುಸರಣಾ ಕ್ರಮದ ಬಗ್ಗೆ ಗ್ರಾಮ ಪಂಚಾಯತಿಯಿಂದ ಮಾಹಿತಿಪಡೆಯುವುದು;

(ಐ) ಅಭಿವೃದ್ಧಿ ಕಾಮಗಾರಿಗಳಿಗಾಗಿ, ಸ್ವಯಂ ಸೇವಾ ಕಾರ್ಮಿಕರನ್ನು ಮತ್ತು ಹಣದ ರೂಪದಲ್ಲಿ ಮತ್ತು ವಸ್ತು ರೂಪದಲ್ಲಿ ವಂತಿಗೆಗಳನ್ನು ಒದಗಿಸುವುದು ಮತ್ತು ಸಂಗ್ರಹಿಸುವುದು ಮತ್ತು ಸ್ವಯಂ ಸೇವಾ ತಂಡಗಳ ಮೂಲಕ ಅಂತಹ ಅಭಿವೃದ್ಧಿ ಕಾಮಗಾರಿಗಳ ಮೇಲ್ವಿಚಾರಣೆ ನಡೆಸುವುದು;

(ಜೆ) ಗ್ರಾಮ ಪಂಚಾಯಿತಿಗೆ ತೆರಿಗೆಗಳನ್ನು ಸಂದಾಯ ಮಾಡುವಂತೆ ಮತ್ತು ಸಾಲಗಳನ್ನು ಮರು ಸಂದಾಯ ಮಾಡುವಂತೆ, ಗ್ರಾಮ ಸಭೆಯ ಸದಸ್ಯರನ್ನು ಮನವೊಲಿಸಲು ಪ್ರಯತ್ನಿಸುವುದು;

(ಕೆ) ವಾರ್ಡ್ ಸಭೆಗಳ ಸಲಹೆಗಳನ್ನು ಪರಿಗಣಿಸಿದ ತರುವಾಯ, ಬೀದಿ ದೀಪಗಳು, ಬೀದಿ ಅಥವಾ ಸಮುದಾಯ ನೀರಿನ ನಲ್ಲಿಗಳು, ಸಾರ್ವಜನಿಕ ಬಾವಿಗಳು, ಸಾರ್ವಜನಿಕ ನೈರ್ಮಲ್ಯ ಘಟಕಗಳು, ನೀರಾವರಿ ಸೌಲಭ್ಯಗಳು ಮತ್ತು ಅಂಥ ಇತರ ಸಾರ್ವಜನಿಕ ಸೌಕರ್ಯ ಯೋಜನೆಗಳಿಗಾಗಿ ಸ್ಥಳವನ್ನು ನಿರ್ಣಯಿಸುವುದು ಹಾಗೂ ಅವುಗಳಲ್ಲಿಯ ಕೊರತೆಗಳನ್ನು ಗುರುತಿಸುವುದು ಮತ್ತು ವಾರ್ಡ್ ಸಭೆಗಳ ಸಲಹೆಗಳನ್ನು ಪರಿಗಣಿಸಿದ ತರುವಾಯ ಪರಿಹಾರ ಕ್ರಮಗಳನ್ನು ಸಲಹೆ ಮಾಡುವುದು ಹಾಗೂ ಕಾಮಗಾರಿಗಳನ್ನು ತೃಪ್ತಿಕರವಾಗಿ ನಿರ್ವಹಿಸಲಾಗಿದೆ ಎಂದು ವರದಿ ನೀಡುವುದು;

(ಎಲ್) ಸ್ವಚ್ಛತೆ, ಪರಿಸರ ಸಂರಕ್ಷಣೆ ಮತ್ತು ಮಾಲಿನ್ಯ ನಿವಾರಣೆಗಳಂಥ ಸಾರ್ವಜನಿಕ ಹಿತಾಸಕ್ತಿಯ ವಿಷಯಗಳ ಬಗ್ಗೆ ಅರಿವು ಮೂಡಿಸುವುದು;

(ಎಮ್) ಪಂಚಾಯಿತಿ ಪ್ರದೇಶದಲ್ಲಿ ನೈರ್ಮಲ್ಯ ವ್ಯವಸ್ಥೆಗಳಲ್ಲಿ ಗ್ರಾಮ ಪಂಚಾಯಿತಿಯ ನೌಕರರಿಗೆ ನೆರವು ನೀಡುವುದು ಮತ್ತು ಕಸವನ್ನು ತೆಗೆದು ಹಾಕುವಲ್ಲಿ ಸ್ವಯಂ ಸೇವೆ ಸಲ್ಲಿಸುವುದು;

(ಎನ್) ಪಂಚಾಯತಿ ಪ್ರದೇಶದಲ್ಲಿ ವಯಸ್ಕ ಶಿಕ್ಷಣ ಕಾರ್ಯಕ್ರಮಕ್ಕೆ ಉತ್ತೇಜನ ನೀಡುವುದು;

(ಓ) ಪಂಚಾಯತಿ ಪ್ರದೇಶದಲ್ಲಿಯ ಶಾಲಾ ಪುರೋಭಿವೃದ್ಧಿ ಸಂಘಗಳ ಅಂಗನವಾಡಿ, ಮಹಿಳಾ ಸಮಾಜ, ಯುವಕ ಹಾಗೂ ಯುವತಿ ಮಂಡಳಿ ಸ್ವಸಹಾಯ ಗುಂಪು, ಹಾಗೂ ಸ್ತ್ರೀಶಕ್ತಿ ಚಟುವಟಿಕೆಗಳಿಗೆ ನೆರವು ನೀಡುವುದು;

(ಪಿ) ವಿಶೇಷವಾಗಿ ರೋಗ ಪ್ರತಿಬಂಧ ಮತ್ತು ಕುಟುಂಬ ಕಲ್ಯಾಣ, ಜನಸಂಖ್ಯೆ ನಿಯಂತ್ರಣದ ಹಾಗೂ ಜಾನುವಾರು ರೋಗ ನಿಯಂತ್ರಣದ ವಿಷಯದಲ್ಲಿ ಪಂಚಾಯತಿ ಪ್ರದೇಶದಲ್ಲಿಯ ಸಾರ್ವಜನಿಕ ಆರೋಗ್ಯ ಕೇಂದ್ರಗಳ ಚಟುವಟಿಕೆಗಳಿಗೆ ನೆರವು ನೀಡುವುದು ಮತ್ತು ಸಾಂಕ್ರಾಮಿಕ ರೋಗಗಳು ಮತ್ತು ನೈಸರ್ಗಿಕ ವಿಕೋಪಗಳು ಸಂಭವಿಸಿದ ಬಗ್ಗೆ ಕೂಡಲೇ ವರದಿ ಮಾಡಲು ವ್ಯವಸ್ಥೆ ಮಾಡುವುದು;

(ಕ್ಯೂ) ಪಂಚಾಯತಿ ಪ್ರದೇಶದಲ್ಲಿಯ ಜನರ ವಿವಿಧ ಸಮೂಹಗಳ ನಡುವೆ ಕೋಮು ಸೌಹಾರ್ದತೆ ಮತ್ತು ಐಕ್ಯತೆಯನ್ನು ಬೆಳೆಸುವುದು ಮತ್ತು ಸ್ಥಳೀಯ ಜನರ ಪ್ರತಿಭೆಯನ್ನು ಅಭಿವ್ಯಕ್ತಗೊಳಿಸಲು ಸಾಂಸ್ಕೃತಿಕ ಉತ್ಸವಗಳು, ಸಾಹಿತ್ಯ ಚಟುವಟಿಕೆಗಳು ಮತ್ತು ಕ್ರೀಡಾಕೂಟಗಳನ್ನು ವ್ಯವಸ್ಥೆಗೊಳಿಸುವುದು;

(ಆರ್) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಸಾರ್ವಜನಿಕ ಆಸ್ತಿಗಳಾದ ಗೋಮಾಳ, ಕೆರೆ, ಕೆರೆಯಂಗಳ, ಅಂತರ್ಜಲ, ದನಕರುಗಳು ಮೇಯುವ ಜಾಗ, ಗಣಿ ಇತ್ಯಾದಿಗಳನ್ನು ಸಂರಕ್ಷಿಸುವುದು ಹಾಗೂ ನಿರ್ವಹಿಸುವುದು;

(ಎಸ್) ಜಾತಿ, ಮತ ಲಿಂಗ ಇತ್ಯಾದಿಗಳ ಆಧಾರದ ಮೇಲೆ ತಾರತಮ್ಯ ಅಥವಾ ಭೇಧಭಾವ ಮಾಡದಂತೆ ಕ್ರಮ ಕೈಗೊಳ್ಳುವುದು ಹಾಗೂ ಮದ್ಯಪಾನದಂಗಡಿಗಳಿಗೆ, ಮಾದಕ ದ್ರವ್ಯ ಮಾರುವ ಅಂಗಡಿಗಳಿಗೆ ಹಾಗೂ ಜೂಜಾಟದ ಅಂಗಡಿಗಳಿಗೆ ಅಥವಾ ಸಾರ್ವಜನಿಕ ಹಿತಾಸಕ್ತಿಗೆ ಧಕ್ಕೆಯುಂಟು ಮಾಡುವಂತಹ ಯಾವುದೇ ಚಟುವಟಿಕೆಗಳಿಗೆ ಲೈಸೆನ್ಸ್ ನೀಡದಿರುವಂತೆ ಗ್ರಾಮ ಪಂಚಾಯತಿಗೆ ನಿರ್ದೇಶನ ನೀಡುವುದು;

(ಟಿ) ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಇರಬಹುದಾದ ಬಾಲ ಕಾರ್ಮಿಕರನ್ನು ಗುರ್ತಿಸುವುದು ಹಾಗೂ ಅವರ ಪುನರ್ವಸತಿಗಾಗಿ ಕ್ರಮ ಕೈಗೊಳ್ಳುವುದು. ಹಾಗೂ ಈ ಸಂಬಂಧದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನಿಗದಿಪಡಿಸಿರುವ ಕಾನೂನು ಕ್ರಮಗಳನ್ನು ಅನುಷ್ಠಾನಗೊಳಿಸಲು ಸಹಾಯ ನೀಡುವುದು; ಮತ್ತು

(ಯು) ನಿಯಮಿಸಬಹುದಾದಂತೆ ಅಂತಹ ಇತರ ಅಧಿಕಾರಗಳನ್ನು ಚಲಾಯಿಸುವುದು ಅಥವಾ ಅಂತಹ ಇತರ ಪ್ರಕಾರ್ಯಗಳನ್ನು ನೆರವೇರಿಸುವುದು.

(4) ಗ್ರಾಮ ಸಭೆಯು ತನ್ನ ಸಾಮಾನ್ಯ ಸಭೆಯಲ್ಲಿ ಅಥವಾ ಒಂದು ಉದ್ದೇಶಕ್ಕಾಗಿ ಕರೆಯಲಾದ ವಿಶೇಷ ಸಭೆಯಲ್ಲಿ, ಬಜೆಟ್ಟಿನಲ್ಲಿ ಮಾಡಿದ ಏರ್ಪಾಡುಗಳನ್ನು, ಯೋಜನಾ ವೆಚ್ಚದ ವಿವರಗಳನ್ನು ಮತ್ತು ನಿಧಿಯ ವಿಷಯವಾರು ಹಂಚಿಕೆಯನ್ನು ಮತ್ತು ಪಂಚಾಯತಿ ಪ್ರದೇಶದಲ್ಲಿ ನಿರ್ವಹಿಸಲಾದ ಅಥವಾ ನಿರ್ವಹಿಸಬೇಕಾದ ಕಾಮಗಾರಿಗಳ ಅಂದಾಜಿನ ಮತ್ತು ಸಾಮಗ್ರಿಗಳ ವೆಚ್ಚದ ಅಂದಾಜುಗಳ ಬಗ್ಗೆ ಸಹ ಚರ್ಚಿಸತಕ್ಕದ್ದು.

(5) ಹಿಂದಿನ ಹಣಕಾಸು ವರ್ಷದ ಲೆಕ್ಕಪತ್ರಗಳ ವಾರ್ಷಿಕ ವಿವರಣ ಪತ್ರ, ಹಿಂದಿನ ವರ್ಷದ ಲೆಕ್ಕ ಪರಿಶೋಧನಾ ಟಿಪ್ಪಣಿ ಮತ್ತು ಅದರ ಮೇಲಿನ ಉತ್ತರಗಳು ಮತ್ತು ಪಂಚಾಯತಿ ಜಮಾಬಂದಿ ವರದಿ ಮತ್ತು ಅದರ ಸಂಬಂಧದಲ್ಲಿ ಕೈಕೊಂಡ ಕ್ರಮ, ಇವುಗಳನ್ನು ಗ್ರಾಮ ಪಂಚಾಯತಿಯು, ಗ್ರಾಮ ಸಭೆಯ ಸಭೆಯಲ್ಲಿ ಅದರ ಪರಿಗಣನೆಗಾಗಿ ಮಂಡಿಸತಕ್ಕದ್ದು. ಗ್ರಾಮ ಸಭೆಯ ಅಭಿಪ್ರಾಯಗಳು, ಶಿಫಾರಸುಗಳು ಅಥವಾ ಸಲಹೆಗಳನ್ನು ಗ್ರಾಮ ಪಂಚಾಯತಿಗೆ ತಿಳಿಸತಕ್ಕದ್ದು. ಗ್ರಾಮ ಪಂಚಾಯತಿಯು ಗ್ರಾಮ ಸಭೆಯ ಅಭಿಪ್ರಾಯಗಳು, ಶಿಫಾರಸುಗಳು ಮತ್ತು ಸಲಹೆಗಳಿಗೆ ಸೂಕ್ತ ಪರಿಗಣನೆ ನೀಡತಕ್ಕದ್ದು.

(6) ಗ್ರಾಮ ಸಭೆಯ ಸಭೆಯನ್ನು ಕರೆಯುವ ಮತ್ತು ನಡೆಸುವ ಕಾರ್ಯವಿಧಾನವು, ನಿಯಮಿಸಬಹುದಾದಂಥದ್ದಾಗಿರತಕ್ಕದ್ದು.

(7) ಗ್ರಾಮ ಸಭೆಯ ಪ್ರತಿಯೊಂದು ಸಭೆಯ ಅಧ್ಯಕ್ಷತೆಯನ್ನು ಸಂಬಂಧಪಟ್ಟ ಗ್ರಾಮ ಪಂಚಾಯತಿಯ ಅಧ್ಯಕ್ಷನು ಮತ್ತು ಅವನ ಗೈರುಹಾಜರಿಯಲ್ಲಿ ಉಪಾಧ್ಯಕ್ಷನು ಮತ್ತು ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಇವರಿಬ್ಬರ ಗೈರುಹಾಜರಿಯಲ್ಲಿ ಗ್ರಾಮ ಪಂಚಾಯತಿಯು ನಾಮನಿರ್ದೇಶನ ಮಾಡಿದ ಅದರ ಯಾವೊಬ್ಬ ಸದಸ್ಯನು ವಹಿಸತಕ್ಕದ್ದು.

(8) ಗ್ರಾಮ ಪಂಚಾಯತಿಯ ಅಧಿಕಾರಿಗಳು, ಅಧ್ಯಕ್ಷನು ಅಗತ್ಯಪಡಿಸ ಬಹುದಾದಂತೆ ಗ್ರಾಮ ಸಭೆಯ ಸಭೆಗಳಿಗೆ ಹಾಜರಾಗತಕ್ಕದ್ದು ಮತ್ತು ಗ್ರಾಮ ಸಭೆಯ, ಸಭೆಯ ಸಂಚಾಲಕನಾಗಿ ಗ್ರಾಮ ಪಂಚಾಯತಿಯು ವಿಶೇಷವಾಗಿ ನಾಮನಿರ್ದೇಶಿಸ ಬಹುದಾದ ಒಬ್ಬ ಅಧಿಕಾರಿಯು, ಸಭೆಗಳನ್ನು ಕರೆಯುವಲ್ಲಿ ಮತ್ತು ನಡೆಸುವಲ್ಲಿ ಮತ್ತು ಅದರ ತೀರ್ಮಾನಗಳನ್ನು ಸಭಾ ನಡವಳಿ ಪುಸ್ತಕದಲ್ಲಿ ದಾಖಲಾತ್ಮಡುವಲ್ಲಿ ಮತ್ತು ಅದರ ಮೇಲೆ ಅನುಸರಣಾ ಕ್ರಮ ಕೈಗೊಳ್ಳುವಲ್ಲಿ ನೆರವು ನೀಡತಕ್ಕದ್ದು.

(9) ಗ್ರಾಮ ಸಭೆಯು, ಗ್ರಾಮಸಭೆಯ ತೀರ್ಮಾನಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದಕ್ಕಾಗಿ ಮತ್ತು ಗ್ರಾಮ ಸಭೆಯ ಅಧಿಕಾರಗಳ ಚಲಾವಣೆ ಮತ್ತು ಪ್ರಕಾರ್ಯಗಳ ನಿರ್ವಹಣೆಯ ಮುನ್ನಡೆಗಾಗಿನ ವಿಷಯಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಗಹನವಾಗಿ ಚರ್ಚಿಸಲು ಹತ್ತಕ್ಕೆ ಕಡಿಮೆಯಲ್ಲದ ಸದಸ್ಯರನ್ನು ಒಳಗೊಂಡಂತೆ, ಅವರ ಪೈಕಿ

ಅರ್ಧಕ್ಕೆ ಕಡಿಮೆಯಲ್ಲದಷ್ಟು ಸಂಖ್ಯೆಯ ಮಹಿಳೆಯರು ಇರತಕ್ಕ ಉಪಸಮಿತಿಗಳನ್ನು ರಚಿಸಬಹುದು.

(10) ಗ್ರಾಮ ಸಭೆಯ ಸಭೆಯಲ್ಲಿ ಯಾವುದೇ ವಿಷಯದ ಸಂಬಂಧದಲ್ಲಿಯ ಎಲ್ಲ ನಿರ್ಣಯಗಳು, ಹಾಜರಿರುವ ಮತ್ತು ಮತ ಚಲಾಯಿಸುವ ಸದಸ್ಯರ ಬಹುಮತದಿಂದ ಅಂಗೀಕೃತವಾಗತಕ್ಕದ್ದು.

**4. 13ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 13ನೇ ಪ್ರಕರಣದಲ್ಲಿ,-

(1) (1)ನೇ ಉಪಪ್ರಕರಣದಲ್ಲಿ, (ಸಿ) ಖಂಡದಲ್ಲಿ "ಅಥವಾ ನಿರಂತರವಾಗಿ ನಾಲ್ಕು ತಿಂಗಳುಗಳಿಗಿಂತ ಹೆಚ್ಚು ಕಾಲ ಪಂಚಾಯತಿಯ ಪ್ರದೇಶದಲ್ಲಿ ಇಲ್ಲದಿದ್ದರೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(2) (2)ನೇ ಉಪ ಪ್ರಕರಣದಲ್ಲಿ,-

(i) "ಅಸಿಸ್ಟೆಂಟ್ ಕಮೀಷನರು" ಎಂಬ ಪದಗಳಿಗೆ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) "ತಾನಾಗಿಯೇ ಅಥವಾ ತನಗೆ ಸಲ್ಲಿಸಿರುವ ವರದಿಯ ಆಧಾರದ ಮೇಲೆ" ಎಂಬ ಪದಗಳಿಗೆ "ಅದಾಗಿಯೇ ಅಥವಾ ಅದಕ್ಕೆ ಸಲ್ಲಿಸಿರುವ ವರದಿಯ ಆಧಾರದ ಮೇಲೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**5. 52ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 52ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ "ಎರಡು ತಿಂಗಳಿಗೊಮ್ಮೆ" ಎಂಬ ಪದಗಳಿಗೆ "ಒಂದು ತಿಂಗಳಿಗೊಮ್ಮೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (4)ನೇ ಉಪಪ್ರಕರಣದಲ್ಲಿ "ಹಾಜರಾಗಲು ಮತ್ತು ವ್ಯವಹರಣೆಗಳಲ್ಲಿ ಪಾಲ್ಗೊಳ್ಳಲು ಹಕ್ಕುಳ್ಳವರಾಗಿರತಕ್ಕದ್ದು" ಎಂಬ ಪದಗಳಿಗೆ "ಹಾಜರಾಗತಕ್ಕದ್ದು ಮತ್ತು ವ್ಯವಹರಣೆಗಳಲ್ಲಿ ಪಾಲ್ಗೊಳ್ಳತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**6. 53ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 53ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ, "ಮೂರನೇ-ಒಂದರಷ್ಟು" ಎಂಬ ಪದಗಳಿಗೆ ಬದಲಾಗಿ "ಅರ್ಧದಷ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (4)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(4ಎ) ಗ್ರಾಮ ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು ಗ್ರಾಮ ಪಂಚಾಯತಿಯ ಸಭೆಯಲ್ಲಿ ಪರಿಗಣನೆಗಾಗಿ ಬರುವ ಯಾವುದೇ ವಿಷಯದಲ್ಲಿ ತಾನು ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಯಾವುದೇ ಹಣಕಾಸಿನ ರೂಪದ ಹಿತಾಸಕ್ತಿ ಹೊಂದಿರುವುದನ್ನು ಗ್ರಾಮ ಪಂಚಾಯತಿಗೆ ತಿಳಿಸುವುದು ಕರ್ತವ್ಯವಾಗಿರತಕ್ಕದ್ದು."

(iii) (6)ನೇ ಉಪ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(6) ಗ್ರಾಮ ಪಂಚಾಯತಿಯ ಅಥವಾ ಅದರ ಯಾವುದೇ ಸಮಿತಿಯ ಸಭೆಗೆ ಹಾಜರಾಗುವುದಕ್ಕಾಗಿ ಪ್ರತಿಯೊಬ್ಬ ಸದಸ್ಯನಿಗೆ ಉಪವೇಶನದ ಪ್ರತಿ ದಿವಸಕ್ಕೆ ನಿಯಮಿಸಬಹುದಾದಂತೆ ಅಂತಹ ಉಪವೇಶನ ಶುಲ್ಕವನ್ನು ಸಂದಾಯ ಮಾಡತಕ್ಕದ್ದು."

7. **55ನೇ ಪ್ರಕರಣದ ತಿದ್ದುಪಡಿ.–** ಮೂಲ ಅಧಿನಿಯಮದ 55ನೇ ಪ್ರಕರಣದ

(1) (1)ನೇ ಉಪ-ಪ್ರಕರಣದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಸಭೆಗಳಲ್ಲಿ ಅಂಗೀಕರಿಸಲಾದ ನಿರ್ಣಯಗಳ ಪರವಾಗಿ ಅಥವಾ ವಿರುದ್ಧವಾಗಿ ಅನುಕ್ರಮವಾಗಿ ಮತ ನೀಡಿದ ಸದಸ್ಯರುಗಳ ಹೆಸರುಗಳ ವಿವರಗಳನ್ನು ಒಳಗೊಂಡಂತೆ ವ್ಯವಹರಣೆಗಳ ಒಂದು ಪ್ರತಿಯನ್ನು ಗ್ರಾಮ ಪಂಚಾಯತಿಯ ಸೂಚನಾ ಫಲಕದ ಮೇಲೆ ಸಭೆ ನಡೆದ ಮೂರು ದಿವಸಗಳೊಳಗಾಗಿ ಪ್ರದರ್ಶಿಸತಕ್ಕದ್ದು".

(2) (2)ನೇ ಉಪ ಪ್ರಕರಣದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ಎಲ್ಲಾ ಸದಸ್ಯರುಗಳಿಗೆ ಸಭೆಯ ನಡವಳಿಕೆಯ ಪ್ರತಿಗಳನ್ನು ಒದಗಿಸತಕ್ಕದ್ದು."

8. **58ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 58ನೇ ಪ್ರಕರಣದಲ್ಲಿ,-

(i) (1ಎ) ಉಪ ಪ್ರಕರಣದಲ್ಲಿ, (xvi) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(xvii) ಜೈವಿಕ ವೈವಿಧ್ಯತೆಯನ್ನು ಸಂರಕ್ಷಿಸುವುದು."

(ii) (3)ನೇ ಉಪ ಪ್ರಕರಣದಲ್ಲಿ, "ಮತ್ತು ತಾಲ್ಲೂಕು ಪಂಚಾಯತಿಯಿಂದ ಮೊದಲೇ ಅನುಮೋದನೆ ಪಡೆದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**9. 61ಬಿ ಪ್ರಕರಣವನ್ನು ಬಿಟ್ಟುಬಿಡುವುದು.-** ಮೂಲ ಅಧಿನಿಯಮದ 61ಬಿ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

**10. 62ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 62ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ,-

(i) "ಗ್ರಾಮ ಪಂಚಾಯತಿಯ ಅಧ್ಯಕ್ಷನು" ಎಂಬ ಪದಗಳ ತರುವಾಯ "ಗ್ರಾಮ ಪಂಚಾಯತಿಯ ಮುಖ್ಯಕಾರ್ಯನಿರ್ವಾಹಕನಾಗಿರತಕ್ಕದ್ದು ಮತ್ತು ಅವನು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (ಬಿ) ಖಂಡದಲ್ಲಿ, "ಗ್ರಾಮ ಪಂಚಾಯತಿಯ ದಾಖಲೆಗಳನ್ನು ನೋಡುವ ಅವಕಾಶವಿರತಕ್ಕದ್ದು" ಎಂಬ ಪದಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಮತ್ತು ದಾಖಲೆಗಳು ಮತ್ತು ಕಡತಗಳನ್ನು ತರಿಸಬಹುದು ಮತ್ತು ಈ ಅಧಿನಿಯಮ, ನಿಯಮಗಳು ಮತ್ತು ಇತರೆ ಸ್ಥಾಯೀ ಆದೇಶಗಳ ಉಪಬಂಧಗಳಿಗನುಸಾರವಾಗಿ ಮತ್ತು ಆ ಬಗ್ಗೆ ಗ್ರಾಮ ಪಂಚಾಯಿತಿಯು ಜಾರಿಗೊಳಿಸಿದ ನಿರ್ಣಯವನ್ನು ಅನುಸರಿಸಿ ಅವುಗಳ ಮೇಲೆ ಆದೇಶಗಳನ್ನು ಹೊರಡಿಸಬಹುದು.

ಪರಂತು, ಕಾರ್ಯದರ್ಶಿಯು ಅಥವಾ ಗ್ರಾಮ ಪಂಚಾಯತಿಯ ಇತರೆ ಯಾವೊಬ್ಬ ಅಧಿಕಾರಿಯು ಸ್ವತಂತ್ರವಾಗಿ ಶಾಸನಬದ್ಧ ಅಧಿಕಾರಗಳನ್ನು ಚಲಾಯಿಸುವುದಕ್ಕೆ ನೇರವಾಗಿ ಸಂಬಂಧಪಟ್ಟ ಕಡತಗಳು ಅಥವಾ ದಾಖಲೆಗಳನ್ನು ಅಧ್ಯಕ್ಷನು ತರಿಸಿಕೊಳ್ಳತಕ್ಕದ್ದಲ್ಲ."

(iii) (ಸಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಡಿ) ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ಯಾವೊಬ್ಬ ಅಧಿಕಾರಿಯನ್ನು ಅಥವಾ ನೌಕರನನ್ನು ಅವನ ವಿರುದ್ಧ ಒಂದು ಶಿಸ್ತು ವ್ಯವಹರಣೆಯನ್ನು ಹೂಡಲು ಉದ್ದೇಶಿಸಲಾಗಿದ್ದರೆ ಅಥವಾ ಅದು ಇತ್ಯರ್ಥದಲ್ಲಿದ್ದರೆ ಅಥವಾ ಯಾವುದೇ ಕ್ರಿಮಿನಲ್ ಅಪರಾಧದ ಬಗ್ಗೆ ಅವನ ವಿರುದ್ಧದ ಒಂದು ಮೊಕದ್ದಮೆಯ ಸಂಬಂಧದಲ್ಲಿ

ತನಿಖೆ ಅಥವಾ ಅಧಿವಿಚಾರಣೆ ನಡೆಯುತ್ತಿದ್ದರೆ ಅವನನ್ನು ಅಮಾನತ್ತಿನಲ್ಲಿ ಇಡಲು ಅಧಿಕಾರ ಹೊಂದಿರತಕ್ಕದ್ದು."

**11. 63ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 63ನೇ ಪ್ರಕರಣದಲ್ಲಿ,-

(i) (ಡಿ) ಖಂಡದಲ್ಲಿ "ತಾಲ್ಲೂಕು ಪಂಚಾಯತಿಯಿಂದ ಮೊದಲೇ ಮಂಜೂರಾತಿ ಪಡೆದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

(ii) ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು, ಯಾವುದೇ ರಸ್ತೆಯನ್ನು ಅಥವಾ ಸೇತುವೆಯನ್ನು ಮಾರ್ಗಪಲ್ಲಟ ಮಾಡುವ, ಬಳಕೆಯನ್ನು ನಿಲ್ಲಿಸುವ ಅಥವಾ ಮುಚ್ಚುವ ತನ್ನ ಉದ್ದೇಶವನ್ನು ಪ್ರಕಟಿಸುವುದಕ್ಕೆ ಮುಂಚೆಯೇ ಹಾಗೆ ಮಾಡತಕ್ಕದ್ದಲ್ಲ."

**12. 79ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 79ನೇ ಪ್ರಕರಣಕ್ಕೆ ಈ ಮುಂದಿನ ಪ್ರಕರಣವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**79. ಜಂಟಿ ಸಮಿತಿಗಳ ನೇಮಕ.-** (1) ಒಂದು ತಾಲ್ಲೂಕಿನೊಳಗಿನ ಅಥವಾ ಒಂದು ಜಿಲ್ಲೆಯಲ್ಲಿಯ ಎರಡು ಅಥವಾ ಹೆಚ್ಚು ತಾಲ್ಲೂಕುಗಳೊಳಗಿನ ಎರಡು ಅಥವಾ ಹೆಚ್ಚು ಗ್ರಾಮ ಪಂಚಾಯಿತಿಗಳು ಅಥವಾ ಒಂದು ಗ್ರಾಮ ಪಂಚಾಯತಿ ಮತ್ತು ಒಂದು ಅಥವಾ ಹೆಚ್ಚು ಇತರ ಸ್ಥಳೀಯ ಪ್ರಾಧಿಕಾರಗಳು ಅಥವಾ ಶಾಸನಬದ್ಧ ನಿಕಾಯಗಳು, ಅವೆಲ್ಲವುಗಳಿಗೆ ಸಾಮಾನ್ಯವಾದ ಯಾವುದೇ ನಿರ್ದಿಷ್ಟ ಉದ್ದೇಶಕ್ಕಾಗಿ ಅಥವಾ ಅವುಗಳು ಜಂಟಿಯಾಗಿ ಹಿತಾಸಕ್ತಿಯನ್ನು ಹೊಂದಿರುವ ಅಥವಾ ಅವುಗಳು ಜಂಟಿಯಾಗಿ ಹೊಣೆಯಾಗಿರುವ ಯಾವುದೇ ಉದ್ದೇಶಕ್ಕಾಗಿ ಅವುಗಳಲ್ಲಿ ಪ್ರತಿಯೊಂದು ಅಂಗೀಕರಿಸಿದ ಅದೇ ರೀತಿಯ ನಿರ್ಣಯದ ಮೂಲಕ ಅಂಥ ಉದ್ದೇಶಕ್ಕಾಗಿ ಒಂದು ಜಂಟಿ ಸಮಿತಿಯನ್ನು ನೇಮಕಮಾಡಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ರಚಿಸಲಾದ ಸಮಿತಿಯು ನಿಯಮಿಸಬಹುದಾದ ಅಂತಹ ವಿಧಾನದಲ್ಲಿ ಸಂಬಂಧಪಟ್ಟ ಪಂಚಾಯಿತಿ ಪ್ರದೇಶದ ನಿವಾಸಿಗಳನ್ನು ಕೋಆಪ್ಟ್ ಮಾಡಿಕೊಳ್ಳಲು ಸಕ್ಷಮವಾಗಿರತಕ್ಕದ್ದು.

(3) ಜಂಟಿ ಸಮಿತಿಯು, ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳ ಅಥವಾ ಶಾಸನಬದ್ಧ ನಿಕಾಯಗಳ ಸದಸ್ಯರಾಗಿರದ, ಆದರೆ ಅಂತಹ ಸಮಿತಿಗಳಲ್ಲಿ ಸೇವೆ ಸಲ್ಲಿಸುವುದಕ್ಕಾಗಿ ವಿಶೇಷ ಅರ್ಹತೆ ಅಥವಾ ವಿಶೇಷ ಹಿತಾಸಕ್ತಿಯನ್ನು ಪಡೆದಿರುವರೆಂದು ಅದು ಅಭಿಪ್ರಾಯಪಡುವ ಅಂತಹ ವ್ಯಕ್ತಿಗಳನ್ನು ಸೇರಿಸಿಕೊಳ್ಳಬಹುದು:

ಪರಂತು, ಅಂತಹ ವ್ಯಕ್ತಿಗಳ ಸಂಖ್ಯೆಯು ಜಂಟಿ ಸಮಿತಿಯ ಸದಸ್ಯರ ಒಟ್ಟು ಸಂಖ್ಯೆಯ ಮೂರನೇ ಒಂದರಷ್ಟನ್ನು ಮೀರತಕ್ಕದ್ದಲ್ಲ.

(4) ಸರ್ಕಾರವು, ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಈ ಮುಂದಿನ ವಿಷಯಗಳಿಗೆ ಉಪಬಂಧ ಕಲ್ಪಿಸಬಹುದು,-

(ಎ) ಜಂಟಿ ಸಮಿತಿಯ ಕಾರ್ಯವಿಧಾನ;

(ಬಿ) ಸಮಿತಿಯ ಸದಸ್ಯರ ಒಟ್ಟು ಸಂಖ್ಯೆ;

(ಸಿ) (2) ಮತ್ತು (3)ನೇ ಉಪಪ್ರಕರಣಗಳ ಅಡಿಯಲ್ಲಿ ನೇಮಕ ಮಾಡಬೇಕಾದ ಅಥವಾ ಚುನಾಯಿಸಬೇಕಾದ ಸದಸ್ಯರ ಸಂಖ್ಯೆ;

(ಡಿ) (2) ಮತ್ತು (3)ನೇ ಉಪ ಪ್ರಕರಣಗಳ ಅಡಿಯಲ್ಲಿ ಚುನಾವಣೆ ಅಥವಾ ನೇಮಕದ ವಿಧಾನ;

(ಇ) ಪದಾವಧಿ;

(ಎಫ್) ಸಂಬಂಧಪಟ್ಟ ಸ್ಥಳೀಯ ಪ್ರಾಧಿಕಾರಗಳು ಅಥವಾ ಶಾಸನಬದ್ಧ ನಿಕಾಯಗಳು ಚಲಾಯಿಸಬಹುದಾದಂಥ ಅಧಿಕಾರಗಳನ್ನು ಮೀರತಕ್ಕದ್ದಲ್ಲದ ಸಮಿತಿಯ ಅಧಿಕಾರಗಳು;

(ಜಿ) ಜಂಟಿ ಸಮಿತಿಗೆ ನಿಧಿಗಳ ಏರ್ಪಾಡುಗಳು ಮತ್ತು ಅದರ ನಿರ್ವಹಣೆ;

(ಹೆಚ್) ಜಂಟಿ ಸಮಿತಿಯ ಅಧ್ಯಕ್ಷರ ಆಯ್ಕೆಯ ವಿಧಾನ.

(5) ಜಂಟಿ ಸಮಿತಿಯನ್ನು ಯಾವ ಉದ್ದೇಶಕ್ಕಾಗಿ ರಚಿಸಲಾಗಿತ್ತೋ ಆ ಉದ್ದೇಶವು ಈಡೇರಿದ ತರುವಾಯ ಅದನ್ನು ವಿಸರ್ಜಿಸಬಹುದು.

(6) ಸರ್ಕಾರವು, ಸಮಿತಿಯನ್ನು ವಿಸರ್ಜಿಸಿದಾಗ ಅದರ ಸ್ವತ್ತುಗಳು ಮತ್ತು ಹೊಣೆಗಾರಿಕೆಗಳ ವಿತರಣೆಯ ಸಂಬಂಧದಲ್ಲಿ ತಾನು ಅವಶ್ಯಕವೆಂದು ಭಾವಿಸುವಂತೆ ಅಂಥ ನಿರ್ದೇಶನವನ್ನು ನೀಡಬಹುದು."

**13. 111ನೇ ಪ್ರಕರಣದ ಪ್ರತಿಯೋಜನೆ.-** ಮೂಲ ಅಧಿನಿಯಮದ 111ನೇ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**111. ಕಾರ್ಯದರ್ಶಿ.-** (1) ಪ್ರತಿಯೊಂದು ಗ್ರಾಮ ಪಂಚಾಯತಿಯು, ಸರ್ಕಾರದ ಅಧಿಕಾರಿಯಾಗಿರತಕ್ಕ ಒಬ್ಬ ಪೂರ್ಣಕಾಲಿಕ ಕಾರ್ಯದರ್ಶಿಯನ್ನು ಹೊಂದಿರತಕ್ಕದ್ದು ಹಾಗೂ

ಅವನ ವೇತನ ಮತ್ತು ಭತ್ಯೆಗಳನ್ನು ಸರ್ಕಾರವು ಗ್ರಾಮ ಪಂಚಾಯಿತಿ ನಿಧಿಗೆ ಜಮಾ ಮಾಡಿದ ನಂತರ ಆ ಗ್ರಾಮ ಪಂಚಾಯತಿ ನಿಧಿಯಿಂದ ಭರಿಸತಕ್ಕದ್ದು.

(2) ಕಾರ್ಯದರ್ಶಿಯು, ಈ ಅಧಿನಿಯಮದ ಅಥವಾ ಅದರ ಅಡಿಯಲ್ಲಿ ರಚಿಸಲಾದ ಯಾವುವೇ ನಿಯಮಗಳ ಅಥವಾ ಉಪ ವಿಧಿಗಳ ಮೂಲಕ ಅಥವಾ ಅಡಿಯಲ್ಲಿ ಅವನಿಗೆ ವಿಧಿಸಲಾದ ಎಲ್ಲಾ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಅಥವಾ ಪ್ರದಾನ ಮಾಡಲಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(3) (2)ನೇ ಉಪ ಪ್ರಕರಣದ ಅಡಿಯಲ್ಲಿಯ ಉಪಬಂಧಗಳ ಸಾಮಾನ್ಯತೆಗೆ ಪ್ರತಿಕೂಲವಾಗದಂತೆ, ಕಾರ್ಯದರ್ಶಿಯು ಈ ಮುಂದಿನ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು, ಎಂದರೆ:-

(ಎ) ಗ್ರಾಮ ಪಂಚಾಯತಿಯ ಮಾಸಿಕ ಲೆಕ್ಕ ಪತ್ರಗಳನ್ನು ಮುಂಬರುವ ತಿಂಗಳ ಹತ್ತನೇ ದಿನಾಂಕದ ಒಳಗೆ ಗ್ರಾಮ ಪಂಚಾಯತಿಗೆ ಸಲ್ಲಿಸುವುದು;

(ಬಿ) ಸರ್ಕಾರವು ಅಥವಾ ಲೆಕ್ಕ ಪರಿಶೋಧಕರು ಕೋರುವ ವಿವರಣಾ ಪಟ್ಟಿಕೆಗಳು, ಲೆಕ್ಕ ಪತ್ರಗಳ ವಿವರಣ ಪಟ್ಟಿಗಳು ಹಾಗೂ ಅಂತಹ ಇತರ ಮಾಹಿತಿಯನ್ನು ಸಲ್ಲಿಸುವುದು;

(ಸಿ) ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ಸಂಸ್ಥೆಗಳ ಲೆಕ್ಕ ಪತ್ರಗಳನ್ನು ಪರೀಕ್ಷಿಸುವುದು ಅಥವಾ ಪರೀಕ್ಷಿಸುವಂತೆ ಮಾಡುವುದು;

(ಡಿ) ಗ್ರಾಮ ಪಂಚಾಯತಿಯ, ಸ್ಥಾಯಿ ಸಮಿತಿಗಳ ಮತ್ತು ಇತರ ಸಮಿತಿಗಳ, ಗ್ರಾಮ ಸಭೆಯ ಹಾಗೂ ವಾರ್ಡ್ ಸಭೆಯ ದಾಖಲೆಗಳನ್ನು ಇಡುವುದು;

(ಇ) ಅನುಮೋದಿತ ಯೋಜನೆಯನ್ನು ಜಿಲ್ಲಾ ಯೋಜನಾ ಸಮಿತಿಗೆ ಸಕಾಲದಲ್ಲಿ ಸಲ್ಲಿಸಲು ಅನುವಾಗುವಂತೆ, ವಾರ್ಷಿಕ ಯೋಜನೆ ಹಾಗೂ ಪಂಚವಾರ್ಷಿಕ ಯೋಜನೆಯ ತಯಾರಿಕೆಯಲ್ಲಿ ಸಮನ್ವಯವನ್ನು ಸಾಧಿಸುವುದು;

(ಎಫ್) ಗ್ರಾಮ ಪಂಚಾಯತಿ ಮತ್ತು ಯೋಜನಾ ನಿಧಿಗಳನ್ನು ಸಂಬಂಧಿಸಿದ ಅಧಿಕಾರಿಗಳಿಗೆ ಹಂಚಿಕೆ ಮಾಡುವುದು ಮತ್ತು ನಿರ್ದಿಷ್ಟಪಡಿಸಿದ ವಿಧಾನದಲ್ಲಿ ಬಳಕೆ ಪ್ರಮಾಣ ಪತ್ರವನ್ನು ಒದಗಿಸುವುದು."

**14. 113ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 113ನೇ ಪ್ರಕರಣದಲ್ಲಿ,-

(1) (2)ನೇ ಉಪ ಪ್ರಕರಣದಲ್ಲಿ, "ಅಮಾನತ್ತಿನಲ್ಲಿಡಬಹುದು" ಎಂಬ ಪದವನ್ನು ಬಿಟ್ಟುಬಿಡತಕ್ಕದ್ದು.

(2) (4)ನೇ ಉಪ ಪ್ರಕರಣದಲ್ಲಿ, "ಮತ್ತು ಅವರ ನಿರ್ಣಯವೇ ಅಂತಿಮವಾದುದಾಗಿರತಕ್ಕದ್ದು" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**15. 113ಎ ಹೊಸ ಪ್ರಕರಣದ ಸೇರ್ಪಡೆ.-** ಮೂಲ ಅಧಿನಿಯಮದ 113ನೇ ಪ್ರಕರಣದ ತರುವಾಯ, ಈ ಮುಂದಿನ ಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"**113ಎ. ಗ್ರಾಮ ಪಂಚಾಯತಿಗೆ ಹೆಚ್ಚುವರಿ ತಾಂತ್ರಿಕ ಸಿಬ್ಬಂದಿಯ ವ್ಯವಸ್ಥೆ.-** (1) ಸರ್ಕಾರವು ಅಗತ್ಯವಿದ್ದಲ್ಲಿ, ಇಂಜಿನಿಯರಿಂಗ್ ಅಥವಾ ತಾಂತ್ರಿಕ ಸಿಬ್ಬಂದಿಯನ್ನು ಒಳಗೊಂಡಂತೆ ರಾಜ್ಯ ಸಿವಿಲ್ ಸೇವೆಗಳ ಅಧಿಕಾರಿಗಳು ಮತ್ತು ನೌಕರರನ್ನು ಒಟ್ಟುಗೂಡಿಸಬಹುದು ಮತ್ತು ಅವರನ್ನು ಒಂದು ಅಥವಾ ಹೆಚ್ಚು ಗ್ರಾಮ ಪಂಚಾಯಿತಿಗಳಿಗೆ ನಿಯೋಜಿಸಬಹುದು:

ಪರಂತು, ಈ ಉಪಪ್ರಕರಣದ ಅಡಿಯಲ್ಲಿ ಅಂಥ ನಿಯೋಜನೆಗೆ ಅಧಿಕಾರಿಗಳ ಅಥವಾ ನೌಕರರ ಕೊರತೆ ಇದ್ದಲ್ಲಿ, ಗ್ರಾಮ ಪಂಚಾಯತಿಯು, ಸೇವೆಯ ತುರ್ತು ಸಂದರ್ಭದಲ್ಲಿ ನಿರ್ದಿಷ್ಟ ಕಾಮಗಾರಿಗಾಗಿ ರಾಜ್ಯ ಸಿವಿಲ್ ಸೇವೆಗಳಿಗೆ ಸೇರಿಲ್ಲದ ಇಂಜಿನಿಯರುಗಳನ್ನು ಒಳಗೊಂಡಂತೆ ತಾಂತ್ರಿಕ ಸಿಬ್ಬಂದಿಯ ಸೇವೆಗಳನ್ನು ಸರ್ಕಾರವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದ ಷರತ್ತುಗಳು ಮತ್ತು ನಿಬಂಧನೆಗಳ ಮೇಲೆ ಬಳಸಿಕೊಳ್ಳಬಹುದು.

(2) (1)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಗ್ರಾಮ ಪಂಚಾಯತಿಗೆ ನಿಯೋಜಿಸಲಾದ ಅಧಿಕಾರಿಗಳು ಮತ್ತು ನೌಕರರು ಅವರು ಆ ಗ್ರಾಮ ಪಂಚಾಯತಿಯ ಅಧಿಕಾರಿಗಳು ಮತ್ತು ನೌಕರರಾಗಿದ್ದರೆ ಹೇಗೋ ಹಾಗೆ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನೆರವೇರಿಸತಕ್ಕದ್ದು ಹಾಗೂ ಅವರು ತಮ್ಮ ಸಾಮಾನ್ಯ ಕರ್ತವ್ಯಗಳಿಗೆ ಹೆಚ್ಚುವರಿಯಾಗಿ, ಸರ್ಕಾರವು ಹೊರಡಿಸಿದ ಮಾರ್ಗಸೂಚಿಗಳು ಯಾವುದಾದರೂ ಇದ್ದಲ್ಲಿ ಅವುಗಳಿಗೆ ಒಳಪಟ್ಟು, ಗ್ರಾಮ ಪಂಚಾಯತಿಯಿಂದ ಅವರಿಗೆ ವಹಿಸಲಾದ ಯಾವುದೇ ಇತರ ಕರ್ತವ್ಯವನ್ನು ನಿರ್ವಹಿಸತಕ್ಕದ್ದು.

(3) (1)ನೇ ಉಪ ಪ್ರಕರಣದ ಅಡಿಯಲ್ಲಿ ಗ್ರಾಮ ಪಂಚಾಯತಿಗೆ ನಿಯೋಜಿಸಲಾದ ಅಧಿಕಾರಿಗಳು ಹಾಗೂ ನೌಕರರು ಈ ಅಧಿನಿಯಮದ ಅಥವಾ ಇತರ ಯಾವುದೇ ಕಾನೂನಿನ ಅಡಿಯಲ್ಲಿ ಗ್ರಾಮ ಪಂಚಾಯತಿಗೆ ವಹಿಸಿರದ, ಸರ್ಕಾರದ ಯಾವುದೇ ಸ್ಕೀಮು, ಪ್ರಾಜೆಕ್ಟ್ ಅಥವಾ ಯೋಜನೆಯ ಅನುಷ್ಠಾನವನ್ನು ಒಳಗೊಂಡಿರುವ

ಕಾಮಗಾರಿಗಳನ್ನು ಕೈಗೊಳ್ಳತಕ್ಕದ್ದು, ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು ಅಥವಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

(4) ಸರ್ಕಾರವು, (1)ನೇ ಉಪ ಪ್ರಕರಣದ ಅಡಿಯಲ್ಲಿ ಗ್ರಾಮ ಪಂಚಾಯತಿಗೆ ನಿಯೋಜಿಸಲಾದ ಅಧಿಕಾರಿಗಳಿಗೆ ಮತ್ತು ನೌಕರರಿಗೆ ವೇತನ, ಭತ್ಯೆಗಳು ಹಾಗೂ ಇತರ ಬಾಕಿಗಳನ್ನು ನೀಡುವುದನ್ನು ಮುಂದುವರೆಸತಕ್ಕದ್ದು."

**16. 121ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 121ನೇ ಪ್ರಕರಣದಲ್ಲಿ "ಸರ್ಕಾರದಿಂದ" ಎಂಬ ಪದಕ್ಕೆ "ರಾಜ್ಯ ಚುನಾವಣಾ ಆಯೋಗದಿಂದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**17. 122ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 122ನೇ ಪ್ರಕರಣದಲ್ಲಿ "ಸರ್ಕಾರವು" ಎಂಬ ಪದಕ್ಕೆ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**18. 123ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 123ನೇ ಪ್ರಕರಣದಲ್ಲಿ "ಸರ್ಕಾರವು" ಎಂಬ ಪದ ಬರುವ ಕಡೆಗಳಲ್ಲೆಲ್ಲ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**19. 124ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 124ನೇ ಪ್ರಕರಣದಲ್ಲಿ "ಡೆಪ್ಯುಟಿ ಕಮೀಷನರು" ಎಂಬ ಪದಗಳಿಗೆ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**20. 128ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 128ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ,-

(i) (ಜೆ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಜೆ-1) ಅವನು, 308ಸಿ ಪ್ರಕರಣದ ಅಡಿಯಲ್ಲಿ ಅನರ್ಹನಾಗಿದ್ದರೆ ಅಥವಾ"

(ii) ಕೊನೆಯಲ್ಲಿರುವ ಪರಂತುಕದಲ್ಲಿ, (ಸಿ) ಉಪಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಸಿಸಿ) (ಜೆ-1) ಖಂಡದಲ್ಲಿಯ ಅನರ್ಹತೆಯು 308ಸಿ ಪ್ರಕರಣದ ಅಡಿಯಲ್ಲಿ ರಾಜ್ಯ ಚುನಾವಣಾ ಆಯೋಗದ ಆದೇಶದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ತರುವಾಯ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು."

**21. 129ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 129ನೇ ಪ್ರಕರಣದಲ್ಲಿ, (1)ನೇ ಉಪ ಪ್ರಕರಣದಲ್ಲಿ, (ಡಿ) ಖಂಡದಲ್ಲಿ "ಅಥವಾ ತಾಲ್ಲೂಕಿನಲ್ಲಿ ನಾಲ್ಕು ಅನುಕ್ರಮ ತಿಂಗಳಿಗೆ ಮೇಲ್ಪಟ್ಟು ಇಲ್ಲದಿದ್ದರೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

**22. 136ಎ ಹೊಸ ಪ್ರಕರಣದ ಸೇರ್ಪಡೆ.-** ಮೂಲ ಅಧಿನಿಯಮದ 136ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**136ಎ. ಸದಸ್ಯರು ಆಸ್ತಿಯನ್ನು ಘೋಷಿಸುವುದು.-** (1) ಪ್ರತಿಯೊಬ್ಬ ಸದಸ್ಯನು ತನ್ನ ಪದಾವಧಿಯ ದಿನಾಂಕದಿಂದ ಮೂರು ತಿಂಗಳೊಳಗೆ ಹಾಗೂ ತನ್ನ ಅವಧಿ ಪೂರ್ಣವಾಗುವವರೆಗೆ ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ರಾಜ್ಯ ಚುನಾವಣಾ ಆಯೋಗ ಅಥವಾ ಸರ್ಕಾರವು ಅಧಿಸೂಚಿಸಬಹುದಾದಂತಹ ಸಕ್ಷಮ ಪ್ರಾಧಿಕಾರಿಯ ಮುಂದೆ, ನಿಯಮಿಸಬಹುದಾದಂಥಹ ರೀತಿಯಲ್ಲಿ ಮತ್ತು ಅಂತಹ ನಮೂನೆಯಲ್ಲಿ ತಾನು ಮತ್ತು ತನ್ನ ಕುಟುಂಬದ ಯಾವೊಬ್ಬ ಸದಸ್ಯನು ಹೊಂದಿರುವ ಆಸ್ತಿಗಳ ಬಗ್ಗೆ ಘೋಷಣೆಯನ್ನು ಸಲ್ಲಿಸತಕ್ಕದ್ದು.

(2) ಒಬ್ಬ ಸದಸ್ಯನು (1)ನೇ ಉಪಪ್ರಕರಣದ ಅಡಿಯಲ್ಲಿ ಒಂದು ಘೋಷಣೆಯನ್ನು ಸಲ್ಲಿಸಿದ ತರುವಾಯ, ಯಾವುದೇ ಆಸ್ತಿಯನ್ನು ಆರ್ಜಿಸಿದಲ್ಲಿ ಅಥವಾ ವಿಲೆ ಮಾಡಿದಲ್ಲಿ, ಅಂತಹ ಆರ್ಜನೆ ಅಥವಾ ಸಂದರ್ಭಾನುಸಾರ ವಿಲೆಯ ದಿನಾಂಕದಿಂದ ಮೂರು ತಿಂಗಳುಗಳೊಳಗೆ ರಾಜ್ಯ ಚುನಾವಣಾ ಆಯೋಗ ಅಥವಾ ಸಕ್ಷಮ ಪ್ರಾಧಿಕಾರಿಯ ಮುಂದೆ ಅವನು ಆ ಬಗ್ಗೆ ಮತ್ತೊಂದು ಘೋಷಣೆಯನ್ನು ಸಲ್ಲಿಸತಕ್ಕದ್ದು.

(3) (1)ನೇ ಉಪ ಪ್ರಕರಣದ ಅಥವಾ (2)ನೇ ಉಪ ಪ್ರಕರಣದ ಅಡಿಯಲ್ಲಿ ಘೋಷಣೆಯನ್ನು ಸಲ್ಲಿಸಲು ತಪ್ಪುವ ಅಥವಾ ಅದು ನಿಜವಾದುದಲ್ಲವೆಂದು ಅಥವಾ ಸರಿಯಾದುದಲ್ಲವೆಂದು ತಿಳಿದಿದ್ದೂ ಅದನ್ನು ಸಲ್ಲಿಸುವ ಯಾವೊಬ್ಬ ಸದಸ್ಯನ ಸದಸ್ಯತ್ವವು ನಿಂತು ಹೋಗತಕ್ಕದ್ದು.

(4) ಯಾವೊಬ್ಬ ಸದಸ್ಯನು (3)ನೇ ಉಪ ಪ್ರಕರಣದ ಅಡಿಯಲ್ಲಿ ಒಬ್ಬ ಸದಸ್ಯನಾಗಿರುವುದು ನಿಂತು ಹೋಗಿದೆಯೇ ಎಂಬ ಯಾವುದೇ ಪ್ರಶ್ನೆಯನ್ನು, ತಾಲ್ಲೂಕು ಪಂಚಾಯತಿಯು ರಾಜ್ಯ ಚುನಾವಣಾ ಆಯೋಗಕ್ಕೆ ಉಲ್ಲೇಖಿಸಿದಾಗ ಅದು ಆ ಬಗ್ಗೆ ತೀರ್ಮಾನಿಸತಕ್ಕದ್ದು ಮತ್ತು ಅದರ ಮೇಲಿನ ರಾಜ್ಯ ಚುನಾವಣಾ ಆಯೋಗದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಕ್ಕಾಗಿ "ಕುಟುಂಬ" ಎಂದರೆ, ಸದಸ್ಯನ/ಸದಸ್ಯೆಳ, ಹೆಂಡತಿ/ಗಂಡ ಮತ್ತು ಅವಲಂಬಿತ ಮಕ್ಕಳು."

**23. 140ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 140ನೇ ಪ್ರಕರಣದಲ್ಲಿ, (5)ನೇ ಉಪ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(6) ತಾಲ್ಲೂಕು ಪಂಚಾಯತಿಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇಬ್ಬರ ಹುದ್ದೆಗಳು ಖಾಲಿ ಇದ್ದಲ್ಲಿ, ಸಾಮಾಜಿಕ ನ್ಯಾಯದ ಸ್ಥಾಯಿ ಸಮಿತಿಯ ಅಧ್ಯಕ್ಷನು, ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಯುಕ್ತವಾಗಿ ಚುನಾಯಿಸುವವರೆಗೆ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು."

**24. 141ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 141ನೇ ಪ್ರಕರಣದಲ್ಲಿ,-

(1) (2)ನೇ ಉಪ ಪ್ರಕರಣದಲ್ಲಿ,-

(i) (ಸಿ) ಖಂಡದಲ್ಲಿ "ಮೂರನೆಯ ಒಂದರಷ್ಟು" ಎಂಬ ಪದಗಳ ಬದಲಾಗಿ "ಅರ್ಧದಷ್ಟು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(ii) (ಜಿ) ಖಂಡದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ತಾಲ್ಲೂಕು ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು ತಾಲ್ಲೂಕು ಪಂಚಾಯತಿಯ ಸಭೆಯಲ್ಲಿ ಪರಿಗಣನೆಗೆ ಬರುವ ಯಾವುದೇ ವಿಷಯದಲ್ಲಿ ತಾನು ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಯಾವುದೇ ಹಣಕಾಸಿನ ರೂಪದ ಹಿತಾಸಕ್ತಿ ಹೊಂದಿರುವುದನ್ನು ತಾಲ್ಲೂಕು ಪಂಚಾಯತಿಗೆ ತಿಳಿಸುವುದು ಕರ್ತವ್ಯವಾಗಿರತಕ್ಕದ್ದು."

(2) (3)ನೇ ಉಪ ಪ್ರಕರಣದಲ್ಲಿ "ನಡವಳಿಕೆ ಪುಸ್ತಕವು ಕಾರ್ಯನಿರ್ವಾಹಕ ಅಧಿಕಾರಿಯ ಸುಪರ್ದಿನಲ್ಲಿರತಕ್ಕದ್ದು" ಎಂಬ ಪದಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಸಭೆಯಲ್ಲಿ ಅಂಗೀಕರಿಸಿದ ನಿರ್ಣಯಗಳ ಪರವಾಗಿ ಅಥವಾ ಅನುಕ್ರಮವಾಗಿ ವಿರುದ್ಧ ಮತ ಚಲಾಯಿಸಿದ ಸದಸ್ಯರ ಹೆಸರುಗಳ ವಿವರಗಳೊಡನೆ ವ್ಯವಹರಣೆಗಳ ಒಂದು ಪ್ರತಿಯನ್ನು ತಾಲ್ಲೂಕು ಪಂಚಾಯತಿಯ ಸೂಚನಾ ಫಲಕದ ಮೇಲೆ ಸಭೆ ನಡೆದ ಮೂರು ದಿವಸಗಳೊಳಗಾಗಿ ಪ್ರದರ್ಶಿಸತಕ್ಕದ್ದು."

(3) (4)ನೇ ಉಪ ಪ್ರಕರಣದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಅಂದರೆ,-

“ಮತ್ತು ಎಲ್ಲಾ ಸದಸ್ಯರುಗಳಿಗೆ ಸಭೆಯ ನಡುವಳಿಯ ಪ್ರತಿಯನ್ನು ಒದಗಿಸತಕ್ಕದ್ದು.”

(4) (5)ನೇ ಉಪ ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

“(6) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದಾಗ್ಯೂ, ಈ ಮುಂದಿನವರಲ್ಲಿ ವಿಶ್ವಾಸವಿಲ್ಲದಿರುವುದನ್ನು ತಿಳಿಸುವ ಸೂಚನೆಯನ್ನು ಪರಿಗಣಿಸುವುದಕ್ಕಾಗಿ ಸಭೆಯನ್ನು ಕರೆಯಲಾಗಿದ್ದಲ್ಲಿ,-

(i) ಅಧ್ಯಕ್ಷನ ಸಂಬಂಧದಲ್ಲಿ, ಉಪಾಧ್ಯಕ್ಷನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(ii) ಉಪಾಧ್ಯಕ್ಷನ ಸಂಬಂಧದಲ್ಲಿ, ಅಧ್ಯಕ್ಷನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(iii) ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇವರಿಬ್ಬರ ಸಂಬಂಧದಲ್ಲಿ, ಸಭೆಯಲ್ಲಿ ಹಾಜರಿರುವ ಚುನಾಯಿತ ಸದಸ್ಯರು ತಮ್ಮಲ್ಲಿಯೇ ಚುನಾಯಿಸಿದ ಒಬ್ಬ ಸದಸ್ಯನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.”

**25. 152ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 152ನೇ ಪ್ರಕರಣದಲ್ಲಿ,-

(i) (ಬಿ) ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

“(ಸಿ) ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಸಾಮಾನ್ಯ ಅಥವಾ ನಿರ್ದಿಷ್ಟ ನಿರ್ದೇಶನಗಳ ಉಪಬಂಧಗಳಿಗೆ ಅಸಂಗತವಾಗಿರದ ತಾಲ್ಲೂಕು ಪಂಚಾಯತಿ ಅಥವಾ ಸ್ಥಾಯೀ ಸಮಿತಿಗಳ ನಿರ್ಣಯಗಳನ್ನು ಅಥವಾ ನಿರ್ಧಾರಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ, ಕಾರ್ಯ ನಿರ್ವಹಣಾಧಿಕಾರಿಯ ಮೇಲೆ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಚಲಾಯಿಸತಕ್ಕದ್ದು.”

(ii) (ಡಿ) ಖಂಡದಲ್ಲಿ “ಕಾರ್ಯನಿರ್ವಹಣಾ ಆಡಳಿತದ” ಎಂಬ ಪದಗಳ ತರುವಾಯ “ನಿಯಂತ್ರಣ ಹಾಗೂ” ಎಂಬ ಪದಗಳನ್ನು ಸೇರಿಸತಕ್ಕದ್ದು.

**26. 156ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮ 156ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ,-

(i) "152ನೇ ಪ್ರಕರಣದ ಅಡಿಯಲ್ಲಿನ ಅಧ್ಯಕ್ಷನ ಸಾಮಾನ್ಯ ಅಧಿಕಾರಗಳಿಗೊಳಪಟ್ಟು" ಎಂಬ ಪದಗಳಿಗೆ ಮತ್ತು ಅಂಕಿಗಳಿಗೆ "ಈ ಅಧಿನಿಯಮದ ಮೂಲಕ ಅಥವಾ ಅದರ ಅಡಿಯಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಲಾದ ಹೊರತು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಬಿ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ.-

"(ಬಿಬಿ) ಈ ಅಧಿನಿಯಮದ ಅಡಿಯಲ್ಲಿ ಮತ್ತು ಅದರ ಅಡಿಯಲ್ಲಿ ರಚಿಸಿದ ನಿಯಮಗಳ ಅಡಿಯಲ್ಲಿ ಅವನಿಗೆ ನಿರ್ದಿಷ್ಟವಾಗಿ ವಿಧಿಸಿರುವ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಅಥವಾ ಪ್ರದತ್ತವಾಗಿರುವ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಸರ್ಕಾರವು ಕಾಲಕಾಲಕ್ಕೆ ಆತನಿಗೆ ವಹಿಸುವ ಅಂತಹ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು."

**27. 161ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 161ನೇ ಪ್ರಕರಣದಲ್ಲಿ "ಸರ್ಕಾರವು" ಎಂಬ ಪದಕ್ಕೆ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**28. 162ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 162ನೇ ಪ್ರಕರಣದಲ್ಲಿ "ಸರ್ಕಾರವು" ಎಂಬ ಪದ ಬರುವ ಕಡೆಗಳಲ್ಲೆಲ್ಲಾ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**29. 163ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 163ನೇ ಪ್ರಕರಣದಲ್ಲಿ "ಸರ್ಕಾರವು" ಎಂಬ ಪದಕ್ಕೆ "ರಾಜ್ಯ ಚುನಾವಣಾ ಆಯೋಗವು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**30. 167ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 167ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ,-

(i) (ಜೆ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಜೆ-1) ಅವನು 308ಸಿ ಪ್ರಕರಣದ ಅಡಿಯಲ್ಲಿ ಅನರ್ಹನಾಗಿದ್ದರೆ."

(ii) ಕೊನೆಯಲ್ಲಿರುವ ಪರಂತುಕದಲ್ಲಿ, (ಸಿ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಸಿಸಿ) (ಜೆ-1) ಖಂಡದಲ್ಲಿಯ ಅನರ್ಹತೆಯು, 308ಸಿ ಪ್ರಕರಣದ ಅಡಿಯಲ್ಲಿ ರಾಜ್ಯ ಚುನಾವಣಾ ಆಯೋಗದ ಆದೇಶದ ದಿನಾಂಕದಿಂದ ಮೂರು ವರ್ಷಗಳು ಮುಕ್ತಾಯವಾದ ತರುವಾಯ ಪ್ರವರ್ತನೆಯಲ್ಲಿರುವುದು ನಿಂತುಹೋಗತಕ್ಕದ್ದು."

**31. 168ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 168ನೇ ಪ್ರಕರಣದಲ್ಲಿ (1)ನೇ ಉಪ ಪ್ರಕರಣದಲ್ಲಿ, (ಡಿ) ಖಂಡದಲ್ಲಿ, "ಅಥವಾ ಜಿಲ್ಲೆಯಲ್ಲಿ, ನಾಲ್ಕು ಅನುಕ್ರಮ ತಿಂಗಳಿಗೆ ಮೇಲ್ಪಟ್ಟು ಇಲ್ಲದಿದ್ದರೆ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು;

**32. 175ಎ ಹೊಸ ಪ್ರಕರಣದ ಸೇರ್ಪಡೆ.-** ಮೂಲ ಅಧಿನಿಯಮದ 175ನೇ ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,-

"**175ಎ. ಸದಸ್ಯರು ಆಸ್ತಿಯನ್ನು ಘೋಷಿಸುವುದು.-** (1) ಪ್ರತಿಯೊಬ್ಬ ಸದಸ್ಯನು, ತನ್ನ ಪದಾವಧಿಯ ದಿನಾಂಕದಿಂದ ಮೂರು ತಿಂಗಳೊಳಗೆ ಹಾಗೂ ತನ್ನ ಅವಧಿ ಪೂರ್ಣವಾಗುವವರೆಗೆ ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ರಾಜ್ಯ ಚುನಾವಣಾ ಆಯೋಗ ಅಥವಾ ಸರ್ಕಾರವು ಅಧಿಸೂಚಿಸಬಹುದಾದಂಥಹ ಸಕ್ಷಮ ಪ್ರಾಧಿಕಾರಿಯ ಮುಂದೆ, ನಿಯಮಿಸಬಹುದಾದಂತಹ ರೀತಿಯಲ್ಲಿ ಮತ್ತು ಅಂತಹ ನಮೂನೆಯಲ್ಲಿ ತಾನು ಮತ್ತು ತನ್ನ ಕುಟುಂಬದ ಯಾವೊಬ್ಬ ಸದಸ್ಯನು ಹೊಂದಿರುವ ಆಸ್ತಿಗಳ ಬಗ್ಗೆ ಒಂದು ಘೋಷಣೆಯನ್ನು ಸಲ್ಲಿಸತಕ್ಕದ್ದು.

(2) ಒಬ್ಬ ಸದಸ್ಯನು, (1)ನೇ ಉಪ-ಪ್ರಕರಣದ ಅಡಿಯಲ್ಲಿ ಒಂದು ಘೋಷಣೆಯನ್ನು ಸಲ್ಲಿಸಿದ ತರುವಾಯ, ಯಾವುದೇ ಆಸ್ತಿಯನ್ನು ಆರ್ಜಿಸಿದಲ್ಲಿ ಅಥವಾ ವಿಲೆ ಮಾಡಿದಲ್ಲಿ, ಅಂತಹ ಆರ್ಜನೆ ಅಥವಾ ಸಂದರ್ಭಾನುಸಾರ ವಿಲೆಯ ದಿನಾಂಕದಿಂದ ಮೂರು ತಿಂಗಳೊಳಗೆ ರಾಜ್ಯ ಚುನಾವಣಾ ಆಯೋಗ ಅಥವಾ ಸಕ್ಷಮ ಪ್ರಾಧಿಕಾರಿಯ ಮುಂದೆ ಅವನು ಆ ಬಗ್ಗೆ ಮತ್ತೊಂದು ಘೋಷಣೆಯನ್ನು ಸಲ್ಲಿಸತಕ್ಕದ್ದು.

(3) (1)ನೇ ಉಪ ಪ್ರಕರಣದ ಅಥವಾ (2)ನೇ ಉಪಪ್ರಕರಣದ ಅಡಿಯಲ್ಲಿ ಘೋಷಣೆಯನ್ನು ಸಲ್ಲಿಸಲು ತಪ್ಪುವ ಅಥವಾ ಅದು ನಿಜವಾದುದಲ್ಲವೆಂದು ಅಥವಾ ಸರಿಯಾದುದಲ್ಲವೆಂದು ತಿಳಿದಿದ್ದೂ ಅದನ್ನು ಸಲ್ಲಿಸುವ ಯಾವೊಬ್ಬ ಸದಸ್ಯನ ಸದಸ್ಯತ್ವವು ನಿಂತು ಹೋಗತಕ್ಕದ್ದು.

(4) ಯಾವೊಬ್ಬ ಸದಸ್ಯನು, (3)ನೇ ಉಪ-ಪ್ರಕರಣದ ಅಡಿಯಲ್ಲಿ ಒಬ್ಬ ಸದಸ್ಯನಾಗಿರುವುದು ನಿಂತು ಹೋಗಿದೆಯೇ ಎಂಬ ಯಾವುದೇ ಪ್ರಶ್ನೆಯನ್ನು ಜಿಲ್ಲಾ ಪಂಚಾಯತಿಯು ರಾಜ್ಯ ಚುನಾವಣಾ ಆಯೋಗಕ್ಕೆ ಉಲ್ಲೇಖಿಸಿದಾಗ ಅದು ಆ ಬಗ್ಗೆ ತೀರ್ಮಾನಿಸತಕ್ಕದ್ದು ಮತ್ತು ಅದರ ಮೇಲಿನ ರಾಜ್ಯ ಚುನಾವಣಾ ಆಯೋಗದ ತೀರ್ಮಾನವು ಅಂತಿಮವಾಗಿರತಕ್ಕದ್ದು.

**ವಿವರಣೆ:-** ಈ ಪ್ರಕರಣದ ಉದ್ದೇಶಗಳಿಗಾಗಿ "ಕುಟುಂಬ" ಎಂದರೆ, ಸದಸ್ಯನ/ಸದಸ್ಯಳ, ಹೆಂಡತಿ/ಗಂಡ ಮತ್ತು ಅವಲಂಬಿತ ಮಕ್ಕಳು".

**33. 179ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 179ನೇ ಪ್ರಕರಣದಲ್ಲಿ,- (5)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(6) ಅಧ್ಯಕ್ಷ ಮತ್ತು ಉಪಾಧ್ಯಕ್ಷನ ಹುದ್ದೆಗಳೆರಡೂ ತೆರವಾದಲ್ಲಿ, ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷನು, ಅಧ್ಯಕ್ಷ ಅಥವಾ ಉಪಾಧ್ಯಕ್ಷನನ್ನು ಯುಕ್ತವಾಗಿ ಚುನಾಯಿಸುವವರೆಗೆ ಅಧ್ಯಕ್ಷನ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು."

**34. 180ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 180ನೇ ಪ್ರಕರಣದಲ್ಲಿ,-

(1) (2)ನೇ ಉಪ-ಪ್ರಕರಣದಲ್ಲಿ,-

(i) (ಸಿ) ಖಂಡದಲ್ಲಿ "ಮೂರನೇ ಒಂದರಷ್ಟು" ಎಂಬ ಪದಗಳ ಬದಲಾಗಿ "ಅರ್ಧದಷ್ಟು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

(ii) (ಜಿ) ಖಂಡದಲ್ಲಿ, ಈ ಮುಂದಿನದನ್ನು ಕೊನೆಯಲ್ಲಿ ಸೇರಿಸತಕ್ಕದ್ದು, ಎಂದರೆ,-

"ಜಿಲ್ಲಾ ಪಂಚಾಯತಿಯ ಪ್ರತಿಯೊಬ್ಬ ಸದಸ್ಯನು, ಜಿಲ್ಲಾ ಪಂಚಾಯತಿಯ ಸಭೆಯಲ್ಲಿ ಪರ್ಯಾಲೋಚನೆಗಾಗಿ ಬಂದಿರುವ ಯಾವುದೇ ವಿಷಯದಲ್ಲಿ ತಾನು ಪ್ರತ್ಯಕ್ಷವಾಗಿಯಾಗಲಿ ಅಥವಾ ಪರೋಕ್ಷವಾಗಿಯಾಗಲಿ ಹೊಂದಿದ ಯಾವುದೇ ಹಣಕಾಸಿನ ರೂಪದ ಹಿತಾಸಕ್ತಿ ಹೊಂದಿರುವುದನ್ನು ಜಿಲ್ಲಾ ಪಂಚಾಯತಿಗೆ ತಿಳಿಸುವುದು ಕರ್ತವ್ಯವಾಗಿರತಕ್ಕದ್ದು."

(2) (3)ನೇ ಉಪ-ಪ್ರಕರಣದಲ್ಲಿ, "ನಡವಳಿ ಪುಸ್ತಕಗಳನ್ನು ಜಿಲ್ಲಾ ಪಂಚಾಯತಿಯ ಕಚೇರಿಯಲ್ಲಿ ಯಾವಾಗಲೂ ಇಡತಕ್ಕದ್ದು ಮತ್ತು ಇದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ವಶದಲ್ಲಿರತಕ್ಕದ್ದು" ಎಂಬ ಪದಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"ಸಭೆಗಳಲ್ಲಿ ಕೈಗೊಂಡ ನಿರ್ಣಯಗಳ ಪರವಾಗಿ ಅಥವಾ ಅನುಕ್ರಮವಾಗಿ ವಿರುದ್ಧ ಮತನೀಡಿದ ಸದಸ್ಯರುಗಳ ಹೆಸರುಗಳ ವಿವರಗಳನ್ನು ಒಳಗೊಂಡಂತೆ ವ್ಯವಹರಣೆಗಳ ಒಂದು ಪ್ರತಿಯನ್ನು ಸಭೆ ನಡೆದ ಮೂರು ದಿವಸಗಳೊಳಗಾಗಿ ಜಿಲ್ಲಾ ಪಂಚಾಯತಿಯ ಸೂಚನಾ ಫಲಕದ ಮೇಲೆ ಪ್ರದರ್ಶಿಸತಕ್ಕದ್ದು."

(3) (4)ನೇ ಉಪಪ್ರಕರಣದ ಕೊನೆಯಲ್ಲಿ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ "ಮತ್ತು ಎಲ್ಲಾ ಸದಸ್ಯರುಗಳಿಗೆ ಸಭೆಯ ನಡುವಳಿಯ ಪ್ರತಿಯನ್ನು ಒದಗಿಸತಕ್ಕದ್ದು."

(4) (5)ನೇ ಉಪ-ಪ್ರಕರಣದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(6) ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, ಈ ಮುಂದಿನವರಲ್ಲಿ ವಿಶ್ವಾಸವಿಲ್ಲದಿರುವುದನ್ನು ತಿಳಿಸುವ ಸೂಚನೆಯನ್ನು ಪರಿಗಣಿಸುವುದಕ್ಕಾಗಿ ಸಭೆಯನ್ನು ಕರೆಯಲಾಗಿದ್ದಲ್ಲಿ,-

(i) ಅಧ್ಯಕ್ಷನ ಸಂಬಂಧದಲ್ಲಿ, ಉಪಾಧ್ಯಕ್ಷನು ಅದರ ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(ii) ಉಪಾಧ್ಯಕ್ಷನ ಸಂಬಂಧದಲ್ಲಿ, ಅಧ್ಯಕ್ಷನು ಅಧ್ಯಕ್ಷತೆಯನ್ನು ವಹಿಸತಕ್ಕದ್ದು;

(iii) ಅಧ್ಯಕ್ಷ ಮತ್ತು ಉಪಾಧ್ಯಕ್ಷ ಇವರಿಬ್ಬರ ಸಂಬಂಧದಲ್ಲಿ, ಸಭೆಯಲ್ಲಿ ಹಾಜರಿರುವ ಚುನಾಯಿತ ಸದಸ್ಯರು ತಮ್ಮಲ್ಲಿಯೇ ಚುನಾಯಿಸಿದ ಒಬ್ಬ ಸದಸ್ಯನು ಅಧ್ಯಕ್ಷತೆಯನ್ನು ವಹಿಸತಕ್ಕದ್ದು."

**35. 193ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 193ನೇ ಪ್ರಕರಣದಲ್ಲಿ, (ಬಿ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ,-

"(ಸಿ) ಈ ಅಧಿನಿಯಮದ ಅಥವಾ ಈ ಅಧಿನಿಯಮದ ಅಡಿಯಲ್ಲಿ ಹೊರಡಿಸಿದ ಯಾವುದೇ ಸಾಮಾನ್ಯ ಅಥವಾ ನಿರ್ದಿಷ್ಟ ನಿರ್ದೇಶನಗಳ ಉಪಬಂಧಗಳಿಗೆ ಅಸಂಗತವಲ್ಲದ ಜಿಲ್ಲಾ ಪಂಚಾಯತಿಯ ಅಥವಾ ಸ್ಥಾಯಿ ಸಮಿತಿಗಳ ನಿರ್ಣಯಗಳು ಅಥವಾ ತೀರ್ಮಾನಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯ ಮೇಲೆ ಅಂತಹ ಆಡಳಿತಾತ್ಮಕ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ನಡೆಸತಕ್ಕದ್ದು."

**36. 197ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 197ನೇ ಪ್ರಕರಣದಲ್ಲಿ, (1)ನೇ ಉಪ-ಪ್ರಕರಣದಲ್ಲಿ,-

(i) "193ನೇ ಪ್ರಕರಣದ ಅಡಿಯಲ್ಲಿನ ಅಧ್ಯಕ್ಷನ ಸಾಮಾನ್ಯ ಅಧಿಕಾರಗಳಿಗೆ ಒಳಪಟ್ಟು" ಎಂಬ ಪದಗಳು ಮತ್ತು ಅಂಕಿಗಳಿಗೆ, "ಈ ಅಧಿನಿಯಮದ ಮೂಲಕ ಅಥವಾ ಅಡಿಯಲ್ಲಿ ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದುದನ್ನುಳಿದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (ಬಿ) ಖಂಡದ ತರುವಾಯ, ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು, ಎಂದರೆ:-

"(ಬಿಬಿ) ಈ ಅಧಿನಿಯಮದ ಅಡಿಯಲ್ಲಿ ಮತ್ತು ಅದರಡಿಯಲ್ಲಿ ಮಾಡಿದ ನಿಯಮಗಳ ಅಡಿಯಲ್ಲಿ ತನಗೆ ವಹಿಸಲಾದ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು ಮತ್ತು ಪ್ರದತ್ತವಾದ ಎಲ್ಲಾ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಕಾಲಕಾಲಕ್ಕೆ ಸರ್ಕಾರವು ತನಗೆ ವಹಿಸಿದ ಅಂತಹ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು."

**37. 202ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 202ನೇ ಪ್ರಕರಣದಲ್ಲಿ,-

(i) (2)ನೇ ಉಪ-ಪ್ರಕರಣದಲ್ಲಿ "ಜಿಲ್ಲಾ ಪಂಚಾಯತಿಗೆ" ಮತ್ತು "ಜಿಲ್ಲಾ ಪಂಚಾಯತಿಯು" ಎಂಬ ಪದಗಳಿಗೆ ಅನುಕ್ರಮವಾಗಿ "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ" ಮತ್ತು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಹಾಗೂ "ಬಂಧನಕಾರಿಯಾಗಿರತಕ್ಕದ್ದು" ಎಂಬ ಪದಗಳ ನಂತರ "ಸದರಿ ಉಲ್ಲೇಖವನ್ನು ಸ್ವೀಕರಿಸಿದ ಮೂರು ತಿಂಗಳೊಳಗಾಗಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯು ಇತ್ಯರ್ಥಪಡಿಸತಕ್ಕದ್ದು ಹಾಗೂ ಈ ರೀತಿ ಉಲ್ಲೇಖ ಕಳುಹಿಸುವ ಮುನ್ನ ವಿವಾದಗ್ರಸ್ತ ತೆರಿಗೆಯ, ದರಗಳ ಅಥವಾ ಫೀಜುಗಳ ಶೇಕಡಾ 50 ಭಾಗವನ್ನು ಅಂತಹ ಮಾಲೀಕನು ಕಡ್ಡಾಯವಾಗಿ ಸಂಬಂಧಿಸಿದ ಗ್ರಾಮ ಪಂಚಾಯತಿಗೆ ಪಾವತಿಸತಕ್ಕದ್ದು. ಮತ್ತು ಈ ರೀತಿ ಶೇಕಡಾ 50 ಪಾವತಿಸಿದ ನಂತರವೇ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯು ಉಲ್ಲೇಖವನ್ನು ಸ್ವೀಕರಿಸತಕ್ಕದ್ದು" ಎಂಬ ಪದಗಳನ್ನು ಸೇರಿಸತಕ್ಕದ್ದು.

(ii) (3)ನೇ ಉಪ-ಪ್ರಕರಣದಲ್ಲಿ, "ಜಿಲ್ಲಾ ಪಂಚಾಯತಿಯು" ಎಂಬ ಪದಗಳಿಗೆ "ಸರ್ಕಾರವು" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**38. 206ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 206ನೇ ಪ್ರಕರಣದಲ್ಲಿ "ಎರಡು ಲಕ್ಷ ರೂಪಾಯಿಗಳ ಅನುದಾನ" ಎಂಬ ಪದಗಳಿಗೆ "ಅದು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ಅಂತಹ ಮೊಬಲಗಿನ, ಆದರೆ ಐದು ಲಕ್ಷ ರೂಪಾಯಿಗಳಿಗೆ ಕಡಿಮೆಯಲ್ಲದ ಅನುದಾನ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**39. 209ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 209ನೇ ಪ್ರಕರಣದಲ್ಲಿನ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**40. 215ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 215ನೇ ಪ್ರಕರಣದಲ್ಲಿನ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**41. 222ನೇ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 222ನೇ ಪ್ರಕರಣದಲ್ಲಿನ ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**42. 308ಎ ಯಿಂದ 308ಡಿ ಹೊಸ ಪ್ರಕರಣಗಳ ಸೇರ್ಪಡೆ.-** ಮೂಲ ಅಧಿನಿಯಮದ 308ನೇ ಪ್ರಕರಣದ ತರುವಾಯ ಈ ಮುಂದಿನ ಪ್ರಕರಣಗಳನ್ನು ಸೇರಿಸತಕ್ಕದ್ದು, ಎಂದರೆ:-

"**308ಎ. ಚುನಾವಣಾ ವೆಚ್ಚದ ಲೆಕ್ಕ ಮತ್ತು ಆ ವೆಚ್ಚದ ಗರಿಷ್ಠ ಮೊತ್ತ.-** (1) ಈ ಅಧಿನಿಯಮದ ಅಡಿಯಲ್ಲಿ ಜಿಲ್ಲಾ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಚುನಾವಣೆಯಲ್ಲಿ ಪ್ರತಿಯೊಬ್ಬ ಅಭ್ಯರ್ಥಿಯು ತಾನಾಗಿಯೇ ಆಗಲಿ ಅಥವಾ ತನ್ನ ಚುನಾವಣಾ ಏಜಂಟನಿಂದಾಗಲಿ, ಎಲ್ಲಾ ವೆಚ್ಚಗಳಿಗೆ, ತನ್ನನ್ನು ನಾಮನಿರ್ದೇಶನ ಮಾಡಿದ ದಿನಾಂಕದಿಂದ ಅದರ ಫಲಿತಾಂಶವು ಘೋಷಿತವಾದ ದಿನಾಂಕದ ನಡುವೆ ಎರಡೂ ದಿನಾಂಕಗಳು ಸೇರಿದಂತೆ ಚುನಾವಣೆಯ ಸಂಬಂಧದಲ್ಲಿ ತಾನು ಅಥವಾ ತನ್ನ ಚುನಾವಣಾ ಏಜೆಂಟನು ವಹಿಸಿದ ಅಥವಾ ಪ್ರಾಧೀಕರಿಸಿದ ಎಲ್ಲ ವೆಚ್ಚಗಳ ಬಗ್ಗೆ ಪ್ರತ್ಯೇಕವಾದ ಮತ್ತು ಸರಿಯಾದ ಲೆಕ್ಕವನ್ನು ಇಡತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿ ಉಲ್ಲೇಖಿಸಿದ ಅಭ್ಯರ್ಥಿಯ ಚುನಾವಣೆಯ ಸಂಬಂಧದಲ್ಲಿ ಒಂದು ರಾಜಕೀಯ ಪಕ್ಷವು ಅಥವಾ ಯಾವುದೇ ಇತರ ಅಸೋಶಿಯೇಷನ್ ಅಥವಾ ನಿಕಾಯ ಅಥವಾ ವ್ಯಕ್ತಿಗಳು ಅಥವಾ ಯಾವೊಬ್ಬ ವ್ಯಕ್ತಿಯು (ಅಭ್ಯರ್ಥಿ ಅಥವಾ ಆತನ ಚುನಾವಣಾ ಏಜೆಂಟನನ್ನು ಹೊರತುಪಡಿಸಿ) ವಹಿಸಿದ ಅಥವಾ ಪ್ರಾಧೀಕರಿಸಿದ ಯಾವುದೇ ವೆಚ್ಚವನ್ನು ಅಭ್ಯರ್ಥಿಯು ಅಥವಾ ಆತನ ಚುನಾವಣಾ ಏಜೆಂಟನು (1)ನೇ ಉಪ ಪ್ರಕರಣದ ಉದ್ದೇಶಕ್ಕಾಗಿ ಚುನಾವಣೆಗೆ ಸಂಬಂಧಿಸಿದಂತೆ ವಹಿಸಿದ ಅಥವಾ ಪ್ರಾಧೀಕರಿಸಿದ ವೆಚ್ಚವೆಂದು ಭಾವಿಸತಕ್ಕದ್ದಲ್ಲ.

**ವಿವರಣೆ** 1:- ಈ ಉಪಪ್ರಕರಣದ ಉದ್ದೇಶಕ್ಕಾಗಿ "ರಾಜಕೀಯ ಪಕ್ಷ" ವು, ತತ್ಕಾಲದಲ್ಲಿ ಪ್ರಸ್ತುತ ಜಾರಿಯಲ್ಲಿರುವ 1968ರ ಚುನಾವಣಾ ಚಿಹ್ನೆಗಳು (ಮೀಸಲಾತಿ ಮತ್ತು ಹಂಚಿಕೆ) ಆದೇಶದಲ್ಲಿನ ಅರ್ಥವನ್ನೇ ಹೊಂದಿರತಕ್ಕದ್ದು.

**ವಿವರಣೆ 2:-** ಸಂದೇಹಗಳ ನಿವಾರಣೆಗಾಗಿ, ಸರ್ಕಾರದ ಸೇವೆಯಲ್ಲಿರುವ ಅಥವಾ ಜಿಲ್ಲಾ ಪಂಚಾಯತಿ ಅಥವಾ ಸಂದರ್ಭಾನುಸಾರ ತಾಲ್ಲೂಕು ಪಂಚಾಯಿತಿ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯು, (ಅಭ್ಯರ್ಥಿಯು ಧಾರಣ ಮಾಡಿದ ಹುದ್ದೆಯ ಕಾರಣದಿಂದಾಗಲಿ ಅಥವಾ ಇತರ ಯಾವುದೇ ಕಾರಣದಿಂದಾಗಲಿ) ಯಾವೊಬ್ಬ ಅಭ್ಯರ್ಥಿ ಅಥವಾ ಅವನ ಚುನಾವಣಾ ಏಜೆಂಟ್ ಅಥವಾ ಅಭ್ಯರ್ಥಿಯ ಅಥವಾ ಅವನ ಚುನಾವಣಾ ಏಜೆಂಟನ ಸಮ್ಮತಿಯೊಡನೆ ಕಾರ್ಯನಿರ್ವಹಿಸುವ ಇತರ ಯಾವೊಬ್ಬ ವ್ಯಕ್ತಿಗಾಗಿ, ವ್ಯಕ್ತಿಗೆ,

ಅಥವಾ ವ್ಯಕ್ತಿಯ ಸಂಬಂಧದಲ್ಲಿ ತನ್ನ ಅಧಿಕೃತ ಕರ್ತವ್ಯದ ನೆರವೇರಿಕೆಯಲ್ಲಿ ಅಥವಾ ನೆರವೇರಿಕೆ ಎಂದು ತಾತ್ಪರ್ಯವಾಗುವಲ್ಲಿ ಮಾಡಿದ ಯಾವುದೇ ವ್ಯವಸ್ಥೆ, ಒದಗಿಸಿದ ಸೌಲಭ್ಯಗಳು ಅಥವಾ ಮಾಡಿದ ಯಾವುದೇ ಇತರ ಕಾರ್ಯ ಅಥವಾ ಕೃತ್ಯದ ಸಂಬಂಧದಲ್ಲಿ ವಹಿಸಿದ ಯಾವುದೇ ವೆಚ್ಚವನ್ನು, ಈ ಪ್ರಕರಣದ ಉದ್ದೇಶಕ್ಕಾಗಿ ಒಬ್ಬ ಅಭ್ಯರ್ಥಿಯು ಅಥವಾ ಚುನಾವಣಾ ಏಜಂಟನು, ಚುನಾವಣೆಯ ಸಂಬಂಧದಲ್ಲಿ ವಹಿಸಿದ ಅಥವಾ ಪ್ರಾಧೀಕರಿಸಿದ ವೆಚ್ಚವೆಂಬುದಾಗಿ ಭಾವಿಸತಕ್ಕದ್ದಲ್ಲ ಎಂದು ಈ ಮೂಲಕ ಘೋಷಿಸಲಾಗಿದೆ.

(3) ಲೆಕ್ಕಪತ್ರವು, ನಿಯಮಿಸಬಹುದಾದ ಅಂತಹ ವಿವರಗಳನ್ನು ಒಳಗೊಂಡಿರತಕ್ಕದ್ದು.

(4) ಸದರಿ ಒಟ್ಟು ವೆಚ್ಚವು ನಿಯಮಿಸಬಹುದಾದ ಅಂತಹ ಮೊತ್ತವನ್ನು ಮೀರತಕ್ಕದ್ದಲ್ಲ.

**308ಬಿ. ರಿಟರ್ನಿಂಗ್ ಆಫೀಸರನಿಗೆ ಲೆಕ್ಕಪತ್ರಗಳನ್ನು ಸಲ್ಲಿಸುವಿಕೆ.-** ಈ ಅಧಿನಿಯಮದ ಅಡಿಯಲ್ಲಿ ಜಿಲ್ಲಾ ಪಂಚಾಯತ್‌ಗೆ ಅಥವಾ ತಾಲ್ಲೂಕು ಪಂಚಾಯತ್‌ಗೆ ಸ್ಪರ್ಧಿಸಿರುವ ಪ್ರತಿಯೊಬ್ಬ ಅಭ್ಯರ್ಥಿಯು, ಗೆದ್ದ ಅಭ್ಯರ್ಥಿಯ ಚುನಾವಣೆಯ ದಿನಾಂಕದಿಂದ ಅಥವಾ ಒಂದು ವೇಳೆ ಚುನಾವಣೆಯಲ್ಲಿ ಒಂದಕ್ಕಿಂತ ಹೆಚ್ಚು ಗೆದ್ದ ಅಭ್ಯರ್ಥಿಗಳಿದ್ದರೆ ಮತ್ತು ಚುನಾವಣಾ ದಿನಾಂಕಗಳು ಬೇರೆ ಬೇರೆಯಾಗಿದ್ದರೆ, ಆ ಎರಡು ದಿನಾಂಕಗಳಲ್ಲಿ ತರುವಾಯದ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಅಧಿನಿಯಮದ ಅಡಿಯಲ್ಲಿ ಒಂದು ಚುನಾವಣೆಗೆ ನೇಮಿಸಲಾದ ರಿಟರ್ನಿಂಗ್ ಆಫೀಸರನಿಗೆ, 308ಎ ಪ್ರಕರಣದ ಅಡಿಯಲ್ಲಿ ತಾನು ಅಥವಾ ತನ್ನ ಚುನಾವಣಾ ಏಜಂಟನು ಇಟ್ಟಿರುವ ಲೆಕ್ಕಪತ್ರಗಳ ಯಥಾ ಪ್ರತಿಯಾಗಿರುವ ತನ್ನ ಚುನಾವಣಾ ವೆಚ್ಚದ ಲೆಕ್ಕಪತ್ರವನ್ನು ಸಲ್ಲಿಸತಕ್ಕದ್ದು.

**308ಸಿ. ಚುನಾವಣಾ ವೆಚ್ಚಗಳ ಲೆಕ್ಕಪತ್ರಗಳನ್ನು ಸಲ್ಲಿಸುವದಕ್ಕೆ ತಪ್ಪುವುದು.-** ಯಾವೊಬ್ಬ ವ್ಯಕ್ತಿಯು,-

(ಎ) ಈ ಅಧಿನಿಯಮದ ಅಡಿಯಲ್ಲಿ ಅಗತ್ಯಪಡಿಸಲಾದಂಥ ಸಮಯದೊಳಗೆ ಮತ್ತು ವಿಧಾನದಲ್ಲಿ ಚುನಾವಣಾ ವೆಚ್ಚದ ಲೆಕ್ಕಪತ್ರಗಳನ್ನು ಸಲ್ಲಿಸಲು ತಪ್ಪಿದ್ದಾನೆಂದು, ಮತ್ತು

(ಬಿ) ತಪ್ಪಿರುವುದಕ್ಕೆ ಸರಿಯಾದ ಕಾರಣ ಅಥವಾ ಸಮರ್ಥನೆಯಿಲ್ಲವೆಂದು,

- ಚುನಾವಣಾ ಆಯೋಗಕ್ಕೆ ಮನವರಿಕೆಯಾದರೆ, ರಾಜ್ಯ ಚುನಾವಣಾ ಆಯೋಗವು ರಾಜ್ಯ ಪತ್ರದಲ್ಲಿ ಪ್ರಕಟಿತವಾದ ಆದೇಶದ ಮೂಲಕ ಆತನನ್ನು ಅನರ್ಹನೆಂದು ಘೋಷಿಸತಕ್ಕದ್ದು ಮತ್ತು ಅಂತಹ ಯಾವೊಬ್ಬ ವ್ಯಕ್ತಿಯು ಆದೇಶದ ದಿನಾಂಕದಿಂದ ಆರು ವರ್ಷಗಳ ಅವಧಿಗಾಗಿ ಅನರ್ಹನಾಗತಕ್ಕದ್ದು.

**308ಡಿ. ರಿಟರ್ನಿಂಗ್ ಆಫೀಸರ್ ಮುಂತಾದವರು ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿ ನಿಯೋಜನೆಯ ಮೇಲೆ ಇರುವುದಾಗಿ ಭಾವಿಸತಕ್ಕದ್ದು.-** ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಯ ಎಲ್ಲಾ ಚುನಾವಣೆಗಳಲ್ಲಿ, ಮತದಾರರ ಪಟ್ಟಿಯನ್ನು ತಯಾರಿಸುವ, ಪರಿಷ್ಕರಿಸುವ ಮತ್ತು ತಿದ್ದುವ ಮತ್ತು ಚುನಾವಣೆ ನಡೆಸುವ ಸಂಬಂಧದಲ್ಲಿ ನಿಯೋಜಿತರಾದ ರಿಟರ್ನಿಂಗ್ ಆಫೀಸರ್‌ಗಳು, ಪ್ರಿಸೈಡಿಂಗ್ ಆಫೀಸರುಗಳು, ಪೋಲಿಂಗ್ ಆಫೀಸರುಗಳು ಮತ್ತು ಇತರ ಯಾರೇ ಅಧಿಕಾರಿಗಳು ಅಥವಾ ಸಿಬ್ಬಂದಿಯು, ಅವರು ಹಾಗೆ ನಿಯೋಜಿತರಾದ ಅವಧಿಗಾಗಿ ರಾಜ್ಯ ಚುನಾವಣಾ ಆಯೋಗಕ್ಕೆ ಪ್ರತಿನಿಯೋಜಿತರಾಗಿದ್ದಾರೆಂದು ಭಾವಿಸತಕ್ಕದ್ದು ಮತ್ತು ಅಂತಹ ಅಧಿಕಾರಿಗಳು ಮತ್ತು ಸಿಬ್ಬಂದಿಯು ಆ ಅವಧಿಯಲ್ಲಿ ರಾಜ್ಯ ಚುನಾವಣಾ ಆಯೋಗದ ನಿಯಂತ್ರಣ, ಮೇಲ್ವಿಚಾರಣೆ ಹಾಗೂ ಶಿಸ್ತಿಗೆ ಒಳಪಟ್ಟಿರತಕ್ಕದ್ದು ಹಾಗೂ ಈ ಅವಧಿಯಲ್ಲಿ ಅಧಿಕಾರಿಗಳು ದುರ್ನಡತೆ ಎಸಗಿದಲ್ಲಿ ಅಂಥವರ ವಿರುದ್ಧ ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957 ರನ್ವಯ ಕ್ರಮ ಕೈಗೊಳ್ಳತಕ್ಕದ್ದು."

**43. 310ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 310ಎ ಪ್ರಕರಣದಲ್ಲಿ, (2)ನೇ ಉಪ ಪ್ರಕರಣದಲ್ಲಿ (iv) ಮತ್ತು (v)ನೇ ಖಂಡಗಳ ಬದಲಾಗಿ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(iv) ಸರ್ಕಾರದಿಂದ ನಾಮನಿರ್ದೇಶಿಸಲ್ಪಟ್ಟ ಜಿಲ್ಲಾ ಪಂಚಾಯತಿಗಳ ಹತ್ತು ಜನ ಅಧ್ಯಕ್ಷರನ್ನು ಸದಸ್ಯರನ್ನಾಗಿ;

(v) ಪ್ರತಿ ಜಿಲ್ಲಾ ಪಂಚಾಯತಿಯಿಂದ ನಾಮನಿರ್ದೇಶಿಸಲ್ಪಟ್ಟ ಒಂದು ಗ್ರಾಮ ಪಂಚಾಯತಿ ಹಾಗೂ ಒಂದು ತಾಲ್ಲೂಕು ಪಂಚಾಯತಿಯ ಅಧ್ಯಕ್ಷರುಗಳನ್ನು ಸದಸ್ಯರುಗಳನ್ನಾಗಿ;

(vi) ವಿಧಾನ ಸಭೆಯ ಸಭಾಧ್ಯಕ್ಷರವರಿಂದ ನಾಮನಿರ್ದೇಶಿಸಲ್ಪಟ್ಟ ಐದು ಜನ ಶಾಸಕರು ಮತ್ತು ವಿಧಾನ ಪರಿಷತ್ತಿನ ಸಭಾಪತಿಯವರಿಂದ ನಾಮನಿರ್ದೇಶಿಸಲ್ಪಟ್ಟ ಇಬ್ಬರು ಶಾಸಕರನ್ನು ಸದಸ್ಯರುಗಳನ್ನಾಗಿ; ಮತ್ತು

(vii) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಯವರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ".

ರಾಜ್ಯಪಾಲರ ಆದೇಶಾನುಸಾರವಾಗಿ ಮತ್ತು ಅವರ ಹೆಸರಿನಲ್ಲಿ

**ಎಂ.ಆರ್. ಹೆಗಡೆ**

ಸರ್ಕಾರದ ಕಾರ್ಯದರ್ಶಿ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ